# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 26-01-2021



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಕೋವಿಡ್: ಪರೀಕ್ಷೆಗಳ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ತಿಂಗಳು ದಿನವೊಂದಕ್ಕೆ 1.30 ಲಕ್ಷ ದಾಟಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆ ಎರಡು ವಾರದಿಂದ ಇಳಿಕೆ ಕಂಡಿದ್ದು, ಮಂಗಳವಾರ 59,427 ಮಂದಿ ಪರೀಕ್ಷೆಗೆ ಒಳಪಟ್ಟಿದ್ದಾರೆ.

ಕೋವಿಡ್ ಎರಡನೇ ಅಲೆಯ ಸಾಧ್ಯತೆ ಕಾರಣ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಪ್ರತಿನಿತ್ಯ 1.20 ಲಕ್ಷ ಪರೀಕ್ಷೆ ನಡೆಸಬೇಕು ಎಂದು ಶಿಫಾರಸು ಮಾಡಿತ್ತು. ಆದರೆ, ಪರೀಕ್ಷೆಗಳ ಸಂಖ್ಯೆ ದಿನದಿಂದ ದಿನಕ್ಕೆ ಇಳಿಕೆಯಾಗುತ್ತಿದೆ. ಈ ತಿಂಗಳು 25 ದಿನಗಳಲ್ಲಿ 24.30 ಲಕ್ಷ ಮಂದಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಈವರೆಗೆ ರಾಜ್ಯದಲ್ಲಿ 1.66 ಕೋಟಿ ಮಂದಿ ಪರೀಕ್ಷೆಗೆ ಒಳಪಟ್ಟಿದ್ದಾರೆ.


ರಾಜ್ಯದಲ್ಲಿ ಹೊಸದಾಗಿ 375 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.36 ಲಕ್ಷ ದಾಟಿದೆ. ಸೋಂಕಿತರಲ್ಲಿ ಮತ್ತೆ ಮೂವರು ಮೃತಪಟ್ಟಿದ್ದಾರೆ.

## ನಗರದ ಕೋವಿಡ್ ಪ್ರಕರಣಗಳು

**3,97,333** ಒಟ್ಟು ಸೋಂಕಿತರು

**3,88,510** ಗುಣಮುಖರಾದವರು

**4,442** ಸಕ್ರಿಯ ಪ್ರಕರಣ




### ಸೋಮವಾರದ ಏರಿಕೆ

**200** ದೃಢಪಟ್ಟ ಪ್ರಕರಣ

**747** ಗುಣಮುಖ | **2** ಸಾವು

ಈವರೆಗೆ ಸಾವಿಗೀಡಾದವರ ಸಂಖ್ಯೆ 12,200ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 1,036 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಕಾಯಿಲೆಯಿಂದ ಚೇತರಿಸಿಕೊಂಡವರ ಸಂಖ್ಯೆ 9.17 ಲಕ್ಷಕ್ಕೆ ತಲುಪಿದೆ. ಸದ್ಯ 6,846 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 152 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ.



ಬೆಂಗಳೂರಿನಲ್ಲಿ 200 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.97 ಲಕ್ಷಕ್ಕೆ ತಲುಪಿದೆ. ಮೈಸೂರಿನಲ್ಲಿ ಮತ್ತೆ 27 ಪ್ರಕರಣಗಳು ವರದಿಯಾಗಿವೆ. ಅಲ್ಲಿ ಸೋಂಕಿತರ ಸಂಖ್ಯೆ 53,256ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಇಬ್ಬರು ಹಾಗೂ ಮೈಸೂರಿನಲ್ಲಿ ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

## ‘ಮಂತ್ರಿಗಳಿಗೆ ಕೋವಿಡ್ ಲಸಿಕೆ’

‘ದೇಶದಲ್ಲಿಯೇ ಅತಿ ಹೆಚ್ಚು ಮಂದಿಗೆ ಲಸಿಕೆ ವಿತರಿಸಿದ ರಾಜ್ಯ ಕರ್ನಾಟಕ. ಲಸಿಕೆಯಿಂದ ಈವರೆಗೆ ಯಾವುದೇ ದೊಡ್ಡ ಮಟ್ಟದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ. ಇದು ಅತ್ಯಂತ ಸುರಕ್ಷಿತ ಲಸಿಕೆಯಾಗಿದೆ. ಹೆಚ್ಚು ಜನರು ಇದನ್ನು ಪಡೆದುಕೊಳ್ಳಬೇಕು. ಜನಸಾಮಾನ್ಯರಿಗೆ ನೈತಿಕ ಸ್ಥೈರ್ಯ ತುಂಬಲು ಎರಡನೇ ಹಂತದಲ್ಲಿ ಮುಖ್ಯಮಂತ್ರಿ, ಸಚಿವರಿಗೆ ಲಸಿಕೆ ನೀಡಲು ನಿರ್ಧರಿಸಲಾಗಿದೆ. ಅದೇ ರೀತಿ, ಸುಮಾರು 500 ಮಂದಿ ಜನಪ್ರಿಯ ವ್ಯಕ್ತಿಗಳಿಗೆ ಲಸಿಕೆ ನೀಡಲು ಕ್ರಮ ವಹಿಸಲು ಪ್ರಧಾನಿ ಅವರಿಗೆ ಮನವಿ ಮಾಡಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

## 2.23 ಲಕ್ಷ ಮಂದಿಗೆ ಲಸಿಕೆ

ರಾಜ್ಯದಲ್ಲಿ ಕೇವಲ ಹತ್ತು ದಿನಗಳಲ್ಲಿ 2.23 ಲಕ್ಷ ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದಾಗಿ ದೇಶದಲ್ಲಿಯೇ ಕರ್ನಾಟಕವು ಅತೀ ಹೆಚ್ಚು ಮಂದಿಗೆ ಲಸಿಕೆ ವಿತರಿಸಿದ ರಾಜ್ಯ ಎಂಬ ಗೌರವಕ್ಕೆ ಭಾಜನವಾಗಿದೆ. ಸೋಮವಾರ 1,099 ಕೇಂದ್ರಗಳಿಂದ 85,422 ಫಲಾನುಭವಿಗಳನ್ನು ಗುರುತಿಸಲಾಗಿತ್ತು. ಅದರಲ್ಲಿ 32,277 ಮಂದಿ ಮಾತ್ರ ಲಸಿಕೆ ಪಡೆದುಕೊಂಡಿದ್ದಾರೆ. ನಿಗದಿಪಡಿಸಿದ ಫಲಾನುಭವಿಗಳಲ್ಲಿ ಶೇ 38 ರಷ್ಟು ಮಂದಿ ಮಾತ್ರ ಹಾಜರಾಗಿದ್ದು, ಉಳಿದವರು ನಾನಾ ಕಾರಣಗಳಿಂದ ಗೈರಾಗಿದ್ದಾರೆ. ಧಾರವಾಡ, ಬೆಂಗಳೂರು ಸೇರಿದಂತೆ 21 ಜಿಲ್ಲೆಗಳಲ್ಲಿ ಅರ್ಧಕ್ಕೂ ಅಧಿಕ ಮಂದಿ ಲಸಿಕೆ ಪಡೆದುಕೊಳ್ಳಲು ಬರಲಿಲ್ಲ. ಲಸಿಕೆ ಪಡೆದವರಲ್ಲಿ ಯಾರಲ್ಲಿಯೂ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಆಮೆಗತಿಯಲ್ಲಿ ಒಳಚರಂಡಿ ಪೈಪ್ ಅಳವಡಿಕೆ ಕಾಮಗಾರಿ ● ಸದಾನಂದನಗರ ನಿವಾಸಿಗಳಿಗಿಲ್ಲ 'ಆನಂದ'

# 6 ತಿಂಗಳಿಂದ ದುರ್ವಾಸನೆ ಶಿಕ್ಷೆ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿಯ ಬೆನ್ನಿಗಾನಹಳ್ಳಿ ವಾರ್ಡ್ (50) ವ್ಯಾಪ್ತಿಯಲ್ಲಿರುವ ಸದಾನಂದನಗರದ ನಿವಾಸಿಗಳು ಸುಮಾರು 6 ತಿಂಗಳಿನಿಂದ ಕೊಳಚೆ ನೀರಿನ ವಾಸನೆ ಸಹಿಸಿಕೊಂಡು ಬದುಕುತ್ತಿದ್ದಾರೆ.

ಈ ಬಗ್ಗೆ ಜಲಮಂಡಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

'ಆರು ತಿಂಗಳ ಹಿಂದೆ, ಒಳಚರಂಡಿಯ ಹಳೆಯ ಪೈಪ್‌ಗಳನ್ನು ತೆಗೆದು, ಹೊಸ ಪೈಪ್‌ಗಳನ್ನು ಹಾಕುವ ಕಾಮಗಾರಿಯನ್ನು ಜಲಮಂಡಳಿ ಕೈಗೆತ್ತಿಕೊಂಡಿದೆ. ಈ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದ್ದು, ಒಳಚರಂಡಿಗಳಲ್ಲಿ ಕಲುಷಿತ ನೀರು ಸರಾಗವಾಗಿ ಹರಿಯದೆ ಕಟ್ಟಿಕೊಂಡಿದೆ. ಆರು ತಿಂಗಳಿನಿಂದ ದುರ್ವಾಸನೆ ಸಹಿಸಿಕೊಂಡೇ ಇರಬೇಕಾಗಿದೆ' ಎಂದು ಸದಾನಂದನಗರ ನಿವಾಸಿ ಕೆ.ಎ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಿಧಾನವಾಗಿಯಾದರೂ ನಡೆಯುತ್ತಿದ್ದ ಕಾಮಗಾರಿ ಈಗ 20 ದಿನಗಳಿಂದ ಸಂಪೂರ್ಣ ಸ್ಥಗಿತವಾಗಿ ಬಿಟ್ಟಿದೆ. ಮನೆ ಮುಂದೆಯೇ ಕಲುಷಿತ ನೀರು ನಿಂತಿದ್ದು ತುಂಬಾ ಸಮಸ್ಯೆಯಾಗುತ್ತಿದೆ. ಸೊಳ್ಳೆ, ನುಸಿಗಳು ಹೆಚ್ಚುತ್ತಿವೆ' ಎಂದು ಅವರು ಅಳಲು ತೋಡಿಕೊಂಡರು.



ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಬೈಯಪ್ಪನಹಳ್ಳಿ ರೈಲು ಹಳಿ ಬಳಿ ಕೊಳಚೆ ನೀರು ಸಂಗ್ರಹವಾಗಿರುವುದು

'ಮಳೆ ನೀರು ಕಾಲುವೆ ಜೊತೆಗೆ, ಒಳಚರಂಡಿ ನೀರು ಕೂಡ ಸೇರಿಕೊಳ್ಳುತ್ತಿದೆ. ಬಿಬಿಎಂಪಿ ಆಗಲಿ, ಜಲಮಂಡಳಿ ಆಗಲಿ ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿಗೆ ಈ ಸಮಸ್ಯೆಗಳೆಲ್ಲ ಗಮನಕ್ಕೆ ಬರುವುದೇ ಇಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

**ರೈಲು ಹಳಿ ಬಳಿ ಸ್ಥಗಿತ:** ಕೃಷ್ಣಯ್ಯನಪಾಳ್ಯ ಬದಿಯಿಂದ ಒಂದೆಡೆ, ಹಳೆಯ ಮದ್ರಾಸ್ ರಸ್ತೆ ಬದಿಯಿಂದ ಇನ್ನೊಂದೆಡೆ ಕಾಮಗಾರಿ ಮುಂದುವರಿದುಕೊಂಡು ಬಂದಿದೆ. ಆದರೆ, ಸದಾನಂದನಗರ ಬಳಿ ಸ್ಥಗಿತಗೊಂಡಿದೆ. ಬೈಯಪ್ಪನಹಳ್ಳಿ ರೈಲು ನಿಲ್ದಾಣದ ಹಳಿಯ ಮಾರ್ಗವಾಗಿ ಈ ದೊಡ್ಡ ಪೈಪ್‌ಗಳನ್ನು ಅಳವಡಿಸಬೇಕಾಗಿದೆ.

'ಜಲಮಂಡಳಿಯು ಯಾವುದೇ ಪೂರ್ವಯೋಜನೆ ಇಲ್ಲದೆ ಈ ಕಾಮಗಾರಿ ಕೈಗೆತ್ತಿಕೊಂಡಂತಿದೆ. ಒಂದು ಕಡೆಯಿಂದ ಕೆಲಸ ಪ್ರಾರಂಭಿಸಿ ಹಂತ – ಹಂತವಾಗಿ ಮುಗಿಸಬೇಕಿತ್ತು. ಈಗ ಎಲ್ಲ ಕಡೆ ಪೈಪ್‌ಗಳನ್ನು ಹಾಕಿ, ಅದಕ್ಕೆ ಒಳಚರಂಡಿ ಸಂಪರ್ಕ ನೀಡದೇ ಹಾಗೆಯೇ ಬಿಟ್ಟಿದ್ದಾರೆ. ಮಳೆ ಬಂದಾಗ ಆ ನೀರಿನ ಜೊತೆಗೆ, ಕೊಳಚೆ ನೀರು ಕೂಡ ಸೇರಿ ರಸ್ತೆಯ ಮೇಲೆ ಹರಿಯುತ್ತದೆ' ಎಂದು ನಿವಾಸಿಗಳು ದೂರುತ್ತಾರೆ.

## 'ವಾರದಲ್ಲಿ ಕಾಮಗಾರಿ ಪೂರ್ಣ'

'ಹಳೆಯ ಕೊಳವೆಗಳನ್ನು ತೆರವುಗೊಳಿಸಿ, ಒಳಚರಂಡಿಯ ಹೊಸ ಪೈಪ್ ಅಳವಡಿಸಲಾಗುತ್ತಿದೆ. 600 ಮಿ.ಮೀ. ಸುತ್ತಳತೆಯ ಕೊಳವೆಗಳನ್ನು ಹಾಕಲಾಗುತ್ತಿದೆ. ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಕೆಲವು ಅನುಮತಿ ಬೇಕಾಗಿರುವುದರಿಂದ ಸದಾನಂದನಗರ ವ್ಯಾಪ್ತಿಯಲ್ಲಿ ಕಾಮಗಾರಿ ಸ್ಥಗಿತಗೊಂಡಿದೆ' ಎಂದು ಜಲಮಂಡಳಿ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಸಿ. ಗಂಗಾಧರ್ ತಿಳಿಸಿದರು.

'ಹಳಿಯ ಕೆಳಗಡೆಯಿಂದ ಈ ಕೊಳವೆಗಳು ಹಾದು ಹೋಗಲಿವೆ. ಹಳಿಯ ಕೆಳಗೆ ಹಳ್ಳ ಬೀಳುವ ಸಾಧ್ಯತೆ ಇರುವುದರಿಂದ, ಎಲ್ಲ ಮುನ್ನೆಚ್ಚರಿಕೆ ತೆಗೆದುಕೊಂಡು ಕಾಮಗಾರಿ ಮುಂದುವರಿಸಬೇಕು ಎಂದ ರೈಲ್ವೆ ಇಲಾಖೆ ಹೇಳಿದೆ. ಇಲಾಖೆಯೊಂದಿಗೆ ಚರ್ಚೆ ನಡೆಸಿ, ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಕಾಮಗಾರಿ ಮುಂದುವರಿಸಲಾಗುವುದು. ಈ ತಿಂಗಳಾಂತ್ಯದಲ್ಲಿ ಕಾಮಗಾರಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ



# ‘ಅನ್ಯ ಉದ್ದೇಶಕ್ಕೆ ಮತದಾರರ ಚೀಟಿ ಬಳಸದಂತೆ ಕಾನೂನು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಚುನಾವಣಾ ಆಯೋಗ ವಿತರಿಸುವ ಮತದಾರರ ಗುರುತಿನ ಚೀಟಿಯು ಮತದಾನಕ್ಕೆ ಮಾತ್ರ ಸೀಮಿತ. ಅದನ್ನು ಅನ್ಯ ಉದ್ದೇಶಕ್ಕೆ ಬಳಸುವುದು ತಪ್ಪು. ಚುನಾವಣೆ ಉದ್ದೇಶಕ್ಕೆ ಮಾತ್ರ ಈ ಗುರುತಿನ ಚೀಟಿ ಬಳಸುವಂತೆ ಕಾನೂನು ತರಲಾಗುವುದು’ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್ ಕುಮಾರ್ ಹೇಳಿದರು.

ನಗರದ ಪುರಭವನದಲ್ಲಿ ಸೋಮವಾರ ಆಯೋಜಿಸಿದ್ದ ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಇ–ಎಪಿಕ್ ಕಾರ್ಡ್ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ವಿಳಾಸ ದೃಢೀಕರಣ ಸೇರಿದಂತೆ ಮತ್ತಿತರ ಉದ್ದೇಶಗಳಿಗೆ ಈ ಚೀಟಿ ಬಳಸಲಾಗುತ್ತಿದೆ. ಅಲ್ಲದೆ, ಮತದಾರರ ಗುರುತಿನ ಚೀಟಿ ವಿತರಣೆ ಹೆಸರಿನಲ್ಲೂ ವಂಚನೆ ಜಾಲ ತಲೆ ಎತ್ತಿದ್ದು, ಅಂಥವರ ವಿರುದ್ಧ ಈಗಾಗಲೇ ಮೊಕದ್ದಮೆಯೂ ದಾಖಲಿಸಲಾಗುತ್ತಿದೆ’ ಎಂದು ಹೇಳಿದರು.

**ಇವಿಎಂ ಪ್ರಶ್ನಿಸುತ್ತಾರೆ, ದೋಷ ಹೇಳುವುದಿಲ್ಲ:** ‘ಚುನಾವಣೆಯಲ್ಲಿ ಸೋತವರು ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಸರಿ ಇಲ್ಲ ಎಂದು ದೂಷಿಸುತ್ತಾರೆ. ಗೆದ್ದವರು ಸರಿ ಇದೆ ಎನ್ನುತ್ತಾರೆ. ಇವಿಎಂಗಳ ಬಗ್ಗೆ ದೂಷಿಸುವವರು ಅದನ್ನು ಸಾಬೀತು ಪಡಿಸಲು ಮುಂದೆ ಬರುವುದಿಲ್ಲ’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಹೇಳಿದರು.

‘ಇವಿಎಂ ಸರಿ ಇಲ್ಲ ಎಂದು ಯಾವುದೇ ಲೀಡರ್ ಹೇಳಿದ ತಕ್ಷಣ ಮಾತ್ರ ಅದನ್ನು ಮಾಧ್ಯಮಗಳು ದೊಡ್ಡ ಸುದ್ದಿ ಮಾಡುತ್ತವೆ. ಆರೋಪ ಸಾಬೀತುಪಡಿಸಲು ವಿಫಲವಾದಾಗ ಅದನ್ನು ದೊಡ್ಡ ಸುದ್ದಿ ಮಾಡುವುದಿಲ್ಲ’ ಎಂದರು.

## ಏನಿದು ಎಪಿಕ್ ಕಾರ್ಡ್?

ಚುನಾವಣಾ ಆಯೋಗವು ಸೋಮವಾರ ಬಿಡುಗಡೆ ಮಾಡಿದ ಇ-ಎಪಿಕ್ (ಡಿಜಿಟಲ್ ಗುರುತಿನ ಚೀಟಿ) ಎಂಬುದು ಸುರಕ್ಷಿತ ಪೋರ್ಟಬಲ್ ಡಾಕ್ಯುಮೆಂಟ್ ಫಾರ್ಮ್ಯಾಟ್ (ಪಿಡಿಎಫ್) ಆವೃತ್ತಿಯಾಗಿದೆ. ಇದನ್ನು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಡೌನ್‌ಲೋಡ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬಹುದು.

ಎರಡು ಹಂತಗಳಲ್ಲಿ ಇ-ಎಪಿಕ್ ಕಾರ್ಡ್ ನೀಡಲು ತೀರ್ಮಾನಿಸಲಾಗಿದೆ. ಇದನ್ನು ವೋಟರ್ ಹೆಲ್ಪ್‌ಲೈನ್ ಮೊಬೈಲ್ ಆ್ಯಪ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ https://eci.gov.in ನಲ್ಲಿಯೂ ಪಡೆದುಕೊಳ್ಳಬಹುದು. ಗುರುತಿನ ಚೀಟಿಗೆ ಮೊಬೈಲ್ ಸಂಖ್ಯೆ ಜೋಡಿಸಿಕೊಂಡವರು (ಲಿಂಕ್) ಇ-ಎಪಿಕ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಅಂಕಿ ಅಂಶ

**5.21** ಕೋಟಿ
ರಾಜ್ಯದಲ್ಲಿರುವ ಒಟ್ಟು ಮತದಾರರ ಸಂಖ್ಯೆ

**5** ಲಕ್ಷ
ಈ ವರ್ಷ ಸೇರ್ಪಡೆಯಾಗಿರುವ ಹೊಸ ಮತದಾರರು

**1.30** ಕೋಟಿ
ರಾಜಧಾನಿ ಬೆಂಗಳೂರಿನ ಜನಸಂಖ್ಯೆ

**90.33** ಲಕ್ಷ
ಬೆಂಗಳೂರಿನಲ್ಲಿನ ಮತದಾರರ ಸಂಖ್ಯೆ

# ಅನ್ಯ ಉದ್ದೇಶಕ್ಕೆ ವೋಟರ್ ಐಡಿ ಬಳಸುವಂತಿಲ್ಲ

## ಮತದಾನಕ್ಕೆ ಮಾತ್ರ ಸೀಮಿತ | ಬೇರೆ ಉದ್ದೇಶಕ್ಕೆ ಬಳಸಿದರೆ ಕಾನೂನು ಕ್ರಮ: ಚುನಾವಣಾಧಿಕಾರಿ ಸಂಜೀವ್‌ಕುಮಾರ್ ಎಚ್ಚರಿಕೆ

## ಆ್ಯಪ್ ಮೂಲಕ ಇ-ಎಪಿಕ್ ಕಾರ್ಡ್ ಡೌನ್‌ಲೋಡ್‌ಗೆ ಅವಕಾಶ | 80 ವರ್ಷ ದಾಟಿದ ಮತದಾರರಿಗೆ ಪೋಸ್ಟಲ್ ಬ್ಯಾಲೆಟ್ ವ್ಯವಸ್ಥೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚುನಾವಣಾ ಆಯೋಗದ 'ಎಪಿಕ್' (ಮತದಾರರ ಗುರುತಿನಚೀಟಿ) ಮತದಾನಕ್ಕೆಮಾತ್ರ ಸೀಮಿತವಾಗಿದ್ದು, ಬೇರೆ ಉದ್ದೇಶಕ್ಕೆ ಬಳಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಸಂಜೀವ್‌ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ನಗರದ ಪುರಭವನದಲ್ಲಿ ಸೋಮವಾರ ನಡೆದ 'ರಾಷ್ಟ್ರೀಯ ಮತದಾರರ ದಿನಾಚರಣೆ-2021' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮತದಾರರ ಗುರುತಿನ ಚೀಟಿ ಮತದಾನಕ್ಕೆ ಹೊರತುಪಡಿಸಿ ಬೇರೆ ಯಾವುದೇ ರೀತಿಯ ಅಧಿಕೃತ ದಾಖಲೆಯಲ್ಲ ಎಂಬುದನ್ನು ಈಗಾಗಲೇ ದೃಢಪಡಿಸಲಾಗಿದೆ. ಆದರೂ ಬೇರೆ ದಾಖಲೆಗಳಿಗೆ ಇದನ್ನು ಬಳಕೆ ಮಾಡುವುದು ಸರಿಯಲ್ಲ. ಎಪಿಕ್ ಕಾರ್ಡ್‌ಗಳು ಚುನಾವಣೆಗೆ ಮಾತ್ರ ಬಳಕೆಯಾಗುವಂತೆ ಕಾನೂನು ತರಲಾಗುವುದು. ಕೆಲವೆಡೆ ಎಪಿಕ್ ಅನ್ನು ಗುರುತಿನ ಚೀಟಿಯಾಗಿ ಮಾನ್ಯ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಸಶಕ್ತ, ಜಾಗರೂಕ, ಸುರಕ್ಷಿತ ಮತ್ತು ಮಾಹಿತಿಯುಳ್ಳ ಮತದಾರ ಈ ವರ್ಷದ ರಾಷ್ಟ್ರೀಯ ಮತದಾರರ ದಿನದ ಧ್ಯೇಯವಾಗಿದೆ. ಚುನಾವಣೆ ವೇಳೆ ಬೇರೆ ಬೇರೆ ಸವಲತ್ತುಗಳನ್ನು ನೀಡಲಾಗುತ್ತಿದೆ. 80 ವರ್ಷ ದಾಟಿದ ಮತದಾರರಿಗೆ ಪೋಸ್ಟಲ್ ಬ್ಯಾಲೆಟ್ ವ್ಯವಸ್ಥೆ ಮಾಡಲಾಗಿದೆ. ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘನೆಯನ್ನು ತಡೆಯಲು ಸಿ-ವಿಜಿಲ್ ಆ್ಯಪ್ ಸಿದ್ಧಪಡಿಸಲಾಗಿದೆ. ನಾಗರಿಕರು ಛಾಯಾಚಿತ್ರ, ವಾಯ್ಸ್, ವಿಡಿಯೋ ಮೂಲಕ ಕಳುಹಿಸಬಹುದು. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಅಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮಾತನಾಡಿ, ಚುನಾವಣೆ ಬಗ್ಗೆ ಯಾರೂ ಹೆಚ್ಚು ಗಮನಹರಿಸುತ್ತಿಲ್ಲ. ಈಗಲೂ ಹೆಚ್ಚು ಮಂದಿ ಮತದಾರರಪಟ್ಟಿಯಲ್ಲಿ ನೋಂದಣಿ ಮಾಡಿಕೊಂಡಿಲ್ಲ. 18 ವರ್ಷ ತುಂಬಿದ ಪ್ರತಿಯೊಬ್ಬರೂ ನೋಂದಣಿ ಮಾಡಿಕೊಳ್ಳಬೇಕು. ವೆಬ್‌ಸೈಟ್ ಮೂಲಕವೇ ಮನೆಯಲ್ಲಿಯೇ ಕುಳಿತು ಮತದಾರರ ಗುರುತಿನ ಚೀಟಿ ಪಡೆಯಬಹುದಾಗಿದೆ. ಚುನಾವಣೆ ಫಲಿತಾಂಶ ಹೊರಬಂದ ಬಳಿಕ ಇವಿಎಂ ಬಗ್ಗೆ ಟೀಕಿಸುವುದು ಸರಿಯಲ್ಲ. ದೇಶದಲ್ಲಿ 1982ರಿಂದಲೂ ಇವಿಎಂ ಬಳಕೆ ಮಾಡಲಾಗುತ್ತಿದೆ. ವಲಸೆ ಕಾರ್ಮಿಕರು ಎಲ್ಲೇ ಇದ್ದರೂ ಮತಚಲಾಯಿಸುವ ಹಕ್ಕು ನೀಡಬೇಕು. ಈ ನಿಟ್ಟಿನಲ್ಲಿ ಕಾನೂನು ಬದಲಾವಣೆ ಮಾಡುವ ಮೂಲಕ ಹೊಸ ವ್ಯವಸ್ಥೆ ರೂಪಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.



ನಗರದಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಮತದಾರ ದಿನಾಚರಣೆ-2021 ಕಾರ್ಯಕ್ರಮದಲ್ಲಿ ಹೊಸ ಮತದಾರರಿಗೆ ಇ-ಎಪಿಕ್ ಕಾರ್ಡ್ ವಿತರಣೆ ಮಾಡಲಾಯಿತು. ರಾಜ್ಯ ಮುಖ್ಯ ಚುನಾವಣಾಧಿಕಾರಿ ಸಂಜೀವ್ ಕುಮಾರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಇತರರಿದ್ದರು.

### ಡಿಜಿಟಲ್ ವೋಟರ್ ಐಡಿ ಬಿಡುಗಡೆ

ಇ-ಎಪಿಕ್ ಕಾರ್ಡ್ ಅನ್ನು ಚುನಾವಣಾ ಆಯೋಗ ಬಿಡುಗಡೆ ಮಾಡಿದೆ. ಇದು ಸುರಕ್ಷಿತ ಪಿಡಿಎಫ್ ಆವೃತ್ತಿಯಾಗಿದೆ. ಇದನ್ನು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಡೌನ್‌ಲೋಡ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬಹುದು. ಎರಡು ಹಂತದಲ್ಲಿ ಇ-ಎಪಿಕ್ ಕಾರ್ಡ್ ನೀಡಲು ತೀರ್ಮಾನಿಸಲಾಗಿದೆ. ಇ-ಎಪಿಕ್ ಕಾರ್ಡ್ ಅನ್ನು ವೋಟರ್ ಹೆಲ್ಪ್‌ಲೈನ್, ಮೊಬೈಲ್ ಆ್ಯಪ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಚುನಾವಣಾ ಆಯೋಗದ ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು.

ಕನ್ನಡಪ್ರಭ

# ನಗರದಲ್ಲಿ ನಿನ್ನೆ 747 ಮಂದಿ ಗುಣಮುಖ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಸೋಮವಾರ 200 ಹೊಸ ಕೋವಿಡ್ ಸೋಂಕು ಪ್ರಕರಣ ಪತ್ತೆಯಾಗಿದ್ದು, 747 ಮಂದಿ ಗುಣಮುಖರಾಗಿದ್ದಾರೆ. ಇಬ್ಬರು ಮೃತಪಟ್ಟ ವರದಿಯಾಗಿದೆ.



ಈಮೂಲಕ ಒಟ್ಟು ಸೋಂಕು ಪ್ರಕರಣಗಳ ಸಂಖ್ಯೆ 3,97,333ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,88,510ಕ್ಕೆ ತಲುಪಿದೆ. ಸದ್ಯ 4442 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 70 ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಸೋಮವಾರ ಇಬ್ಬರು ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 4,380ಕ್ಕೆ ಏರಿಕೆಯಾಗಿದೆ.

ಕನ್ನಡಪ್ರಭ Tue, 26 January 2021
https://kpepaper.asianetnews


ಕನ್ನಡಪ್ರಭ

# ನಗರದಲ್ಲಿ 10 ದಿನದಲ್ಲಿ 46000 ಮಂದಿಗೆ ಲಸಿಕೆ

## ನಿನ್ನೆ ಒಂದೇ ದಿನ 7622 ಮಂದಿಗೆ ವ್ಯಾಕ್ಸಿನ್
## 1560 ಮಂದಿ ಪಾಲಿಕೆ ಆಸ್ಪತ್ರೆ ಸಿಬ್ಬಂದಿಗೂ ವಿತರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಸೋಮವಾರ 221 ಕೋವಿಡ್ ಲಸಿಕಾ ಕೇಂದ್ರದಲ್ಲಿ 7,622 (ಶೇ.38) ಮಂದಿ ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.



ನಗರದಲ್ಲಿ ಕೋವಿಡ್ ಲಸಿಕೆ ಅಭಿಯಾನ ಹತ್ತು ದಿನ ಪೂರೈಸಿದ್ದು, ಒಟ್ಟು 46,606 ಮಂದಿಗೆ ಲಸಿಕೆ ನೀಡಲಾಗಿದೆ.

ಸೋಮವಾರ ಬಿಬಿಎಂಪಿ ಹಾಗೂ ಸರ್ಕಾರಿ ಆಸ್ಪತ್ರೆಯ 47 ಹಾಗೂ ಖಾಸಗಿ ಆಸ್ಪತ್ರೆಯ 174 ಲಸಿಕಾ ಕೇಂದ್ರದಲ್ಲಿ 19,457 ಆರೋಗ್ಯ ಸಿಬ್ಬಂದಿಗೆ ಕೋವಿಡ್ ಲಸಿಕೆ ಹಾಕುವುದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಈ ಪೈಕಿ ಸರ್ಕಾರಿ ಮತ್ತು ಬಿಬಿಎಂಪಿ ಆಸ್ಪತ್ರೆಯ 1,560 ಹಾಗೂ ಖಾಸಗಿ ಆಸ್ಪತ್ರೆಯ 6,062 ಆರೋಗ್ಯ ಕಾರ್ಯಕರ್ತರು ಲಸಿಕೆ ಪಡೆದುಕೊಂಡಿದ್ದಾರೆ.

| ದಿನಾಂಕ | ಗುರಿ | ಲಸಿಕೆ ಪಡೆದವರು | ಶೇಕಡ |
|---|---|---|---|
| ಜ.16 | 816 | 497 | 60 |
| ಜ.17 | 6,277 | 3,569 | 58 |
| ಜ.18 | 20,226 | 8,489 | 42 |
| ಜ.19 | 10,343 | 3,978 | 38 |
| ಜ.20 | 6,836 | 3,803 | 56 |
| ಜ.21 | 10,469 | 5,410 | 52 |
| ಜ.22 | 15,562 | 7,590 | 49 |
| ಜ.23 | 10,065 | 4,568 | 45 |
| ಜ.24 | 3,049 | 1,080 | 35 |
| ಜ.25 | 19,457 | 7,622 | 28 |
| ಒಟ್ಟು | 1,03,100 | 46,606 | 45.20 |



ಕನ್ನಡಪ್ರಭ

# ಅಕ್ವೇರಿಯಂ ರೀತಿ ಹಲಸೂರು ಕೆರೆ ಸ್ವಚ್ಛತೆ



**ಬೆಂಗಳೂರು:** ಕೆರೆ ನೀರು ಶುದ್ಧೀಕರಣದ ಜೊತೆಗೆ ಜೀವ ವೈವಿಧ್ಯತೆಯ ಸಂರಕ್ಷಣೆಗೆ ಬಿಬಿಎಂಪಿ ವಿನೂತನ ಮಾದರಿಯ 'ಕೊಳಚೆ ನೀರು, ಪಾಚಿ ಸ್ವಚ್ಛತಾ ಉಪಕರಣ' (ಡಿಫ್ಯೂಸ್ಡ್ ಏರಿಏಟರ್)ಗಳನ್ನು ಅಳವಡಿಕೆ ಮುಂದಾಗಿದ್ದು, ಪ್ರಾಯೋಗಿಕವಾಗಿ ನಗರದ ಹಲಸೂರು ಕೆರೆಯಲ್ಲಿ ಈ ಯಂತ್ರ ಅಳವಡಿಸಲಾಗಿದೆ. ಈ ವಿನೂತನ ಯಂತ್ರ ಅಕ್ವೇರಿಯಂಗಳಲ್ಲಿ ನೀರು ಶುದ್ಧೀಕರಣ ಮಾಡುವ ಮಾದರಿ ಯಲ್ಲಿ ಕಾರ್ಯನಿರ್ವಹಿಸಲಿದೆ. ಇದರಿಂದ ಕೆರೆಗಳಲ್ಲಿ ಪಾಚಿ ಹಾಗೂ ಕೊಳಚೆ ಅಂಶಗಳು ಶುದ್ಧೀಕರಣವಾಗಲಿದ್ದು, ಜಲಚರಗಳಿಗೆ ಸಹಕಾರಿಯಾಗಲಿದೆ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣ ಮಾಹಿತಿ ನೀಡಿದ್ದಾರೆ. ಈ ಉಪಕರಣ ಕೆರೆಯಲ್ಲಿನ ಕೆಳಭಾಗದ ನೀರು ಮೇಲಕ್ಕೆ ತರುವುದರಿಂದ ನೀರಿನ ಆಮ್ಲಜನಕದ ಪ್ರಮಾಣ ಹೆಚ್ಚಾಗುತ್ತದೆ. ಇದರಿಂದ ಕೆರೆಗಳಲ್ಲಿರುವ ಜಲಚರಗಳು ಹಾಗೂ ಜೀವವೈವಿಧ್ಯತೆಗೆ ನೆರವಾಗಲಿದೆ. ಅಲ್ಲದೆ, ಕೆರೆಗಳಲ್ಲಿರುವ ಪಾಚಿ, ಕೊಳಚೆ ಹಾಗೂ ಅನುಪಯುಕ್ತ ಬ್ಯಾಕ್ಟೀರಿಯಾಗಳನ್ನೂ ಸಂಗ್ರಹಿಸಿ ನೀರು ಶುದ್ಧೀಕರಣ ಮಾಡುತ್ತದೆ. ಈ ಯಂತ್ರ ಪ್ರತಿ ಗಂಟೆಗೆ 1.2 ಎಂ.ಎಲ್‌ಡಿ ನೀರು ಶುದ್ಧೀಕರಣ ಮಾಡಲಿದೆ. ಮುಂದಿನ ದಿನಗಳಲ್ಲಿ ಮಡಿವಾಳ ಹಾಗೂ ಸ್ಯಾಂಕಿ ಕೆರೆಗಳಲ್ಲಿ ಈ ಉಪಕರಣವನ್ನು ಅಳವಡಿಸುವ ಯೋಜನೆ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ.

VK
ವಿಜಯ ಕರ್ನಾಟಕ

# ಆ್ಯಪ್‌ನಲ್ಲೇ ಸಿಗಲಿದೆ ಡಿಜಿಟಲ್ ಗುರುತಿನ ಚೀಟಿ

## ಎಪಿಕ್ ಕಾರ್ಡ್ ಚುನಾವಣೆಗೆ ಮಾತ್ರ ಬಳಕೆ ಆಗಬೇಕು: ಮುಖ್ಯ ಚುನಾವಣಾಧಿಕಾರಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರ ಚುನಾವಣಾ ಆಯೋಗವು ಬಿಡುಗಡೆ ಮಾಡಿರುವ ನೂತನ ಆ್ಯಪ್ ಮೂಲಕ ಸಾರ್ವಜನಿಕರೇ ನೇರವಾಗಿ ಡಿಜಿಟಲ್ ಗುರುತಿನ ಚೀಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್‌ಕುಮಾರ್ ಹೇಳಿದರು.

### 18 ವರ್ಷ ತುಂಬಿದವರನ್ನು ಪಟ್ಟಿಗೆ ಸೇರಿಸುವ ಗುರಿ

ಪುರಭವನದಲ್ಲಿ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಮತದಾರರ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ''ಮತದಾರರ ಗುರುತಿನ ಚೀಟಿ ಚುನಾವಣೆಗೆ ಮಾತ್ರ ಬಳಕೆ ಆಗಬೇಕು. ಆದರೆ ಬೇರೆ ದಾಖಲೆಗಳಿಗೂ ಇದನ್ನು ಬಳಸುತ್ತಿದ್ದಾರೆ. ಅದು ತಪ್ಪು'' ಎಂದು ಹೇಳಿದರು.

''ಮುಂದಿನ ದಿನಗಳಲ್ಲಿ ಎಪಿಕ್ ಕಾರ್ಡ್‌ಗಳು ಚುನಾವಣೆಗೆ ಮಾತ್ರ ಬಳಕೆಯಾಗುವಂತೆ ಕಾನೂನು ತರಲಾಗುವುದು. 18 ವರ್ಷ ತುಂಬಿದವರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವುದು ಚುನಾವಣಾ ಆಯೋಗದ ಗುರಿಯಾಗಿದೆ. ಅದಕ್ಕಾಗಿ ಹಲವು ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಎಲ್ಲರೂ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಪ್ರೇರೇಪಣೆ ನೀಡಲಾಗುತ್ತಿದೆ'' ಎಂದರು.

ಸರಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮಾತನಾಡಿ, ''ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಹೊಸಬರಿಗೆ ಮತದಾರರ ಗುರುತಿನ ಚೀಟಿ, ಚುನಾವಣೆಗೆ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ವಿತರಣೆ ಮಾಡಲಾಗಿದೆ. ಚುನಾವಣಾ ಪ್ರಕ್ರಿಯೆ ಬಹಳ ಕಠಿಣವಾಗಿದೆ. ಹಿಂದೆ 21 ವರ್ಷ ತುಂಬಿದವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗುತ್ತಿತ್ತು. ಈಗ 18 ವರ್ಷ ತುಂಬಿದವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗುತ್ತಿದೆ'' ಎಂದರು.

''ಚುನಾವಣೆ ಬಗ್ಗೆ ಯಾರೂ ಹೆಚ್ಚು ಗಮನಹರಿಸುತ್ತಿಲ್ಲ. ಹಕ್ಕು ಬಂದಾಗ ನಿಮ್ಮ ಹಕ್ಕನ್ನು ಸರಿಯಾಗಿ ಚಲಾಯಿಸಬೇಕು. ಯುವ ಪೀಳಿಗೆಗೆ ಮತದಾನ ಮಾಡುವ ಬಗ್ಗೆ ಹೆಚ್ಚು ಅರಿವು ಮೂಡಿಸಬೇಕು. ಮತದಾನ ಪ್ರಕ್ರಿಯೆಯಲ್ಲಿ ಯುವಕರ ಪಾತ್ರ ಬಹಳ ಪ್ರಾಮುಖ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಮತದಾನ ಮಾಡಬೇಕು'' ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಶ್ರೀ ವಸ್ತ್ರದ್, ಪಾಲಿಕೆ ವಿಶೇಷ ಆಯುಕ್ತ (ಆಡಳಿತ) ಜೆ. ಮಂಜುನಾಥ್ ಮತ್ತಿತರರಿದ್ದರು.




ಪುರಭವನದಲ್ಲಿ ಸಾಂಕೇತಿಕವಾಗಿ ಡಿಜಿಟಲ್ ಗುರುತಿನ ಪತ್ರ ವಿತರಿಸಲಾಯಿತು.

### ಇವಿಎಂ ಬಗ್ಗೆ ತಪ್ಪು ಕಲ್ಪನೆ ಬೇಡ

''20 ವರ್ಷಗಳಿಂದ ಇವಿಎಂಗಳನ್ನು ಬಳಕೆ ಮಾಡಲಾಗುತ್ತಿದೆ. ಆದರೆ, ಜನರಲ್ಲಿ ಇವಿಎಂಗಳ ಬಗ್ಗೆ ಕೆಲ ಅನುಮಾನಗಳಿವೆ. ಇವಿಎಂಗಳ ಬಗ್ಗೆ ಇರುವ ಊಹಾಪೋಹಗಳು ಸರಿಯಲ್ಲ. ಅದರಲ್ಲಿರುವ ಮಾಹಿತಿಯನ್ನು ತಿರುಚಲು ಆಗುವುದಿಲ್ಲ. ಭಾರತದಲ್ಲಿ ಇವಿಎಂ ಸರಿಯಾಗಿದ್ದು, ಆ ಬಗ್ಗೆ ಎಲ್ಲರಲ್ಲೂ ಅರಿವು ಮೂಡಿಸಬೇಕು. ತಪ್ಪು ಮಾಹಿತಿ ಯಾರೂ ನೀಡಬಾರದು'' ಎಂದು ಸಂಜೀವ್‌ಕುಮಾರ್ ತಿಳಿಸಿದರು. ಇದೇ ವೇಳೆ ಬಿಬಿಎಂಪಿ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಎನ್. ಮಂಜುನಾಥ್ ಪ್ರಸಾದ್ ಅವರಿಗೆ 2021ನೇ ಸಾಲಿನ ರಾಜ್ಯ ಮಟ್ಟದ ಚುನಾವಣಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

### ಸಹಾಯವಾಣಿ 1950

**ಮತದಾರರ ಸಮಸ್ಯೆಗಳನ್ನು ಆಲಿಸಲು 1950 ಸಹಾಯವಾಣಿ ಸಂಖ್ಯೆಗೆ ಶುಲ್ಕ ರಹಿತ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.**

### ನಿಮಗಿದು ಗೊತ್ತೇ ?

**ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳ ಪೈಕಿ 1.30 ಕೋಟಿ ಜನಸಂಖ್ಯೆಯಿದ್ದು, 93,75,000 ಮತದಾರರಿದ್ದಾರೆ. ಮತದಾನ ಮಾಡಲು 8,500 ಮತಗಟ್ಟೆಗಳಿವೆ.**

### ನೀತಿಸಂಹಿತೆ ಉಲ್ಲಂಘನೆಗೆ ಸಿ-ವಿಜಿಲ್ ತಂತ್ರಾಂಶ

ಚುನಾವಣೆ ವೇಳೆ ನೀತಿಸಂಹಿತೆ ಉಲ್ಲಂಘನೆ ತಡೆಯುವ ಸಂಬಂಧ ಸಿ-ವಿಜಲ್ ತಂತ್ರಾಂಶ ಸಿದ್ಧಪಡಿಸಲಾಗಿದ್ದು, ಯಾರಾದರೂ ನೀತಿಸಂಹಿತೆ ಉಲ್ಲಂಘನೆ ಮಾಡುವುದು ಕಂಡುಬಂದಲ್ಲಿ ನಾಗರಿಕರು ಛಾಯಾಚಿತ್ರ, ಧ್ವನಿ, ದೃಶ್ಯಾವಳಿ ಮೂಲಕ ಕಳುಹಿಸಬಹುದು. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಿದ್ದಾರೆ.

VK
ವಿಜಯ ಕರ್ನಾಟಕ

ವಳಗೇರಹಳ್ಳಿ ಕೆರೆ ಅಂಗಳ ಅತಿಕ್ರಮಣ

# ಕೆರೆ ಒತ್ತುವರಿ ತೆರವಿಗೆ ನಿರ್ಲಕ್ಷ್ಯ

■ ರವಿಕುಮಾರ ಬೆಟ್ಟದಪುರ
ಬೆಂಗಳೂರು
avikumarb0519@gmail.com

ಕೆಂಗೇರಿ ಉಪನಗರದ ವಳಗೇರಹಳ್ಳಿ ಕೆರೆ ಸುತ್ತಮುತ್ತಲಿನ ಸರಕಾರಿ ಜಾಗದ ಒತ್ತುವರಿ ತೆರವಿಗೆ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.

**ರಾಜಕೀಯ ಪ್ರಭಾವ ಬಳಸಿ 24.2 ಎಕರೆ ಜಾಗ ಒತ್ತುವರಿ**

**ಮನೆ ಕಟ್ಟಿ ಬಾಡಿಗೆಗೆ ನೀಡುವುದಕ್ಕಿಲ್ಲ ಕಡಿವಾಣ**

ಕೆಂಗೇರಿ ಹೋಬಳಿಯ ವಳಗೇರಹಳ್ಳಿಯ ಸರ್ವೆ ನಂಬರ್ 16ರಲ್ಲಿ ಸುಮಾರು 24.2 ಎಕರೆ ಸರಕಾರಿ ಜಾಗವಿದೆ. ಇದನ್ನು ಖಾಸಗಿ ವ್ಯಕ್ತಿಗಳು ತಮ್ಮ ರಾಜಕೀಯ ಪ್ರಭಾವ ಬಳಸಿಕೊಂಡು ಒತ್ತುವರಿ ಮಾಡಿಕೊಂಡಿದ್ದಾರೆ. ಅಪಾರ್ಟ್‌ಮೆಂಟ್, ಮನೆಗಳ ನಿರ್ಮಾಣ ಮಾಡಲಾಗಿದೆ. ಇನ್ನೂ ಕೆಲವರು ಖಾಲಿ ನಿವೇಶನಗಳಿಗೆ ಬೇಲಿ ಹಾಕಿಕೊಂಡು ಸ್ವಂತದ್ದು ಎಂದೇ ಬಿಂಬಿಸಿಕೊಂಡಿದ್ದಾರೆ.

ಈ ಹಿಂದೆ ಸರಕಾರಿ ಜಾಗವನ್ನು ಕೆರೆ ಅಭಿವೃದ್ಧಿಗೆಂದು ನೀಡಲಾಗಿತ್ತು. ಆದರೆ, ಇದನ್ನು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆರೆ ಸುತ್ತಮುತ್ತಲೂ ಕೊಳೆಗೇರಿ ರೂಪದಲ್ಲಿ ಮನೆಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡಲಾಗಿದೆ. ಕೆರೆ ಸುತ್ತಮುತ್ತ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರು ಕೆರೆಗೆ ತ್ಯಾಜ್ಯ ವಸ್ತುಗಳನ್ನು ಬಿಸಾಡುತ್ತಿದ್ದಾರೆ, ಮನೆಯ ಒಳಚರಂಡಿ ನೀರನ್ನು ಹರಿಬಿಡುತ್ತಿದ್ದಾರೆ. ಇದರಿಂದ ಕೆರೆ ನೀರು ಕೂಡ ಮಲಿನಗೊಳ್ಳುತ್ತಿದೆ ಎಂದು ಸ್ಥಳೀಯ ಮಹದೇವಯ್ಯ ಆರೋಪಿಸಿದರು. »12

ವಿಕ ವಿಶೇಷ



### ಬಿಡಿಎ ತಂತಿ ಬೇಲಿ ಕಿತ್ತು ಅತಿಕ್ರಮ

ವಳಗೇರಹಳ್ಳಿ ಕೆರೆ ಪಕ್ಕದಲ್ಲಿ ಬಿಡಿಎ ಫ್ಲ್ಯಾಟ್ ಗಳು ನಿರ್ಮಾಣವಾಗಿವೆ. ಆದರೆ, ಬಿಡಿಎ ನಿವಾಸದ ಅಂಚಿನಲ್ಲಿ ತಂತಿಬೇಲಿ ಹಾಕಲಾಗಿತ್ತು. ಕಿಡಿಗೇಡಿಗಳು ಈ ತಂತಿ ಬೇಲಿಯನ್ನು ಕಿತ್ತು ಅತಿಕ್ರಮಿಸಿಕೊಂಡಿದ್ದಾರೆ. ವಳಗೇರಹಳ್ಳಿ ಕೆಲವು ನಿವಾಸಿಗಳು ತಮ್ಮ ಕಟ್ಟಡಗಳನ್ನು ಒಡೆದಾಗ ಬರುವ ಕಟ್ಟಡ ತ್ಯಾಜ್ಯವನ್ನು ರಾತ್ರೋರಾತ್ರಿ ಖಾಲಿ ನಿವೇಶನಗಳಲ್ಲಿ ತಂದು ಸುರಿಯುತ್ತಾರೆ. ಇದರಿಂದ ನಿವೇಶನ ಮಾಲೀಕರು ಸ್ವಚ್ಛಗೊಳಿಸಲು ಸಾಕಷ್ಟು ಹಣ ವೆಚ್ಚ ಮಾಡಬೇಕಾಗುತ್ತದೆ. ಜತೆಗೆ ಬಿಬಿಎಂಪಿ ಕಾಮಗಾರಿ ನಡೆದಾಗಲೂ ಅಲ್ಲಿನ ತ್ಯಾಜ್ಯವನ್ನು ಇಲ್ಲಿ ಸುರಿಯುತ್ತಾರೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ನಿವೇಶನದ ಮಾಲೀಕರೊಬ್ಬರು ಹೇಳಿದರು.

### ಬೋಗಸ್ ಹಕ್ಕು ಪತ್ರ

ಸರಕಾರಿ ಜಾಗ ಒತ್ತುವರಿ ಮಾಡಿಕೊಂಡು ನಿರ್ಮಿಸಿರುವ ಮನೆಗಳಿಗೆ ಹಕ್ಕುಪತ್ರಗಳನ್ನು ಪಡೆದುಕೊಂಡಿರುವುದಾಗಿ ಕೆಲವರು ಹೇಳುತ್ತಾರೆ. ಆದರೆ, ತಾಲೂಕು ಕಚೇರಿಗಳಲ್ಲಿ ಈ ಬಗ್ಗೆ ಪರಿಶೀಲಿಸಿದರೆ, ಹಕ್ಕು ಪತ್ರ ವಿತರಣೆಯೇ ಆಗಿಲ್ಲ. ಬೋಗಸ್ ಹಕ್ಕು ಪತ್ರ ಪಡೆದುಕೊಂಡು ಮನೆಗಳನ್ನು ಬಾಡಿಗೆ ನೀಡಿ ಜನರನ್ನು ಯಾಮಾರಿಸುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿವೆ.

**ವಳಗೇರಹಳ್ಳಿ ಕೆರೆ ಸುತ್ತಮುತ್ತಲ ಜಾಗವನ್ನು ಬಹುತೇಕರು ಅತಿಕ್ರಮಿಸಿಕೊಂಡು ಮನೆ, ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಿಕೊಂಡಿದ್ದಾರೆ. ಹಣವುಳ್ಳವರು, ರಾಜಕೀಯ ಬಲವುಳ್ಳವರಿಗೆ ಮಾತ್ರ ಒತ್ತುವರಿ ಮಾಡಲು ಸಾಧ್ಯವಾಗುತ್ತಿದೆ. ಬಲಾಢ್ಯರು ಮನೆ ನಿರ್ಮಾಣ ಮಾಡಿ ಹೊರಗಡೆಯಿಂದ ಬರುವವರಿಗೆ ಬಾಡಿಗೆ ನೀಡಿದ್ದಾರೆ.**

**- ಕುಮಾರಸ್ವಾಮಿ**
ಸ್ಥಳೀಯ ನಿವಾಸಿ

# ಒತ್ತುವರಿ ತೆರವಿಗೆ ಅಧಿಕಾರಿಗಳ ನಿರ್ಲಕ್ಷ್ಯ

» ನಮ್ಮ ಮೊದಲ ಪುಟದಿಂದ

**ತೆರವಿಗೆ ಕೋರ್ಟ್ ಆದೇಶ**

ವಳಗೇರಹಳ್ಳಿ ಗ್ರಾಮದ ಸರ್ವೆ ನಂಬರ್ 16ರ ಸರಕಾರಿ ಖರಾಬು ಜಾಗದ ಒತ್ತುವರಿ ತೆರವು ಕುರಿತು 2012ರಲ್ಲಿ ಆದೇಶವಾಗಿತ್ತು. ಬಳಿಕ 2013ರಲ್ಲಿ ತಹಸೀಲ್ದಾರ್ ಸಂಬಂಧಪಟ್ಟ ಅಧಿಕಾರಿಗಳ ಜತೆ ಸಭೆ ನಡೆಸಿ ಒತ್ತುವರಿ ಜಾಗ ತೆರವುಗೊಳಿಸುವಂತೆ ಆದೇಶ ಹೊರಡಿಸಿದ್ದರು. ಆದರೆ ಈ ಭೂಮಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಅಭಿವೃದ್ಧಿಯಾಗಿರುವುದರಿಂದ ತೆರವುಗೊಳಿಸಲು ಹೆಚ್ಚಿನ ಪೊಲೀಸ್ ಸಿಬ್ಬಂದಿ, ಜೆಸಿಬಿ ಮತ್ತು ಇನ್ನಿತರ ಸಿಬ್ಬಂದಿಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿತ್ತು. ಆದರೆ, ಜಿಲ್ಲಾಧಿಕಾರಿಗಳಿಂದ ಇದುವರೆಗೂ ಉತ್ತರ ದೊರೆತಿಲ್ಲ.

ಒತ್ತುವರಿ ಜಾಗದಲ್ಲಿ ಬಲಾಢ್ಯರು ರಾಜಕೀಯ ಪ್ರಭಾವ ಬಳಸಿಕೊಂಡು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಇನ್ನೂ ಕೆಲವರು ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ. ಕೆರೆಗಳ ಸುತ್ತಮುತ್ತ ಮನೆಗಳನ್ನು ನಿರ್ಮಿಸಿ ಹೊರಗಡೆಯಿಂದ ಬಂದವರಿಗೆ ಮಾರಾಟ ಮಾಡಲಾಗುತ್ತಿದೆ.

VK ವಿಜಯ ಕರ್ನಾಟಕ

### ಇಂದಿರಾನಗರ-ಕೋರಮಂಗಲ ನಡುವಿನ ರಿಂಗ್ ರಸ್ತೆಯಲ್ಲಿ ಅವ್ಯವಸ್ಥೆ

# ರಸ್ತೆ ಧೂಳಿಗೆ ವರ್ಷದಿಂದ ಮುಕ್ತಿ ಇಲ್ಲ !

■ **ವಿಕ ಸುದ್ದಿಲೋಕ** ಬೆಂಗಳೂರು

ಇಂದಿರಾನಗರ ಮತ್ತು ಕೋರಮಂಗಲ ನಡುವಿನ ರಿಂಗ್ ರಸ್ತೆಯ ಎರಡೂ ಬದಿಯ ರಸ್ತೆಯು ಧೂಳಿನಿಂದ ಕೂಡಿದ್ದು, ವಾಹನ ಸಂಚಾರರು ಮತ್ತು ಪಾದಚಾರಿಗಳು ವಾಯು ಮಾಲಿನ್ಯದಿಂದಾಗಿ ನರಳುವಂತಾಗಿದೆ.

**ಉದ್ದೇಶಿತ ವೈಟ್ ಟಾಪಿಂಗ್ ಕಾಮಗಾರಿಗಾಗಿ ಸ್ವಚ್ಛತೆ ಸ್ಥಗಿತ**

**ವ್ಯಾಪಾರಸ್ಥರು, ಸ್ಥಳೀಯರು ವಾಹನ ಸವಾರರ ಪರದಾಟ**





ಈ ರಸ್ತೆ ಮೇಲೆ ದಟ್ಟವಾದ ಧೂಳು ಕೂತಿದ್ದು, ಇದುವರೆಗೂ ಬಿಬಿಎಂಪಿ ವತಿಯಿಂದ ರಸ್ತೆ ಸ್ವಚ್ಛಗೊಳಿಸಿದ್ದನ್ನು ನೋಡಿಲ್ಲ. ಬಸ್ಸುಗಳು ಮತ್ತು ನಾಲ್ಕು ಚಕ್ರದ ವಾಹನಗಳು ವೇಗವಾಗಿ ಚಲಿಸಿದರೆ, ಧೂಳು ಏಳುವುದು. ಇದರಿಂದ ದ್ವಿಚಕ್ರ ವಾಹನ ಸವಾರರು ಮತ್ತು ಇಲ್ಲಿನ ಅಂಗಡಿಯವರು ಉಸಿರಾಟದ ಸಮಸ್ಯೆಯಿಂದ ಪರಿತಪಿಸುವಂತಾಗಿದೆ ಎಂದು ಸ್ಥಳೀಯ ವ್ಯಾಪಾರಿಗಳು ಅಳಲು ತೋಡಿಕೊಂಡಿದ್ದಾರೆ.

ಚರಂಡಿ, ನಡಿಗೆ ಪಥ, ಇತರೆ ಕಾಮಗಾರಿ ಹಿನ್ನೆಲೆಯಲ್ಲಿ ಅಳಿದುಳಿದ ಕಾಮಗಾರಿ ತ್ಯಾಜ್ಯ ರಸ್ತೆ ಬದಿಯಲ್ಲೇ ಇರುವುದರಿಂದ ಧೂಳು ಹೆಚ್ಚಾಗಿದೆ. ಇದನ್ನು ವಿಲೇವಾರಿ ಮಾಡಲು ಪಾಲಿಕೆ ಮುಂದಾಗಿಲ್ಲ. ಧೂಳಿನ ಕಾರಣದಿಂದ ದ್ವಿಚಕ್ರ ವಾಹನ ಸವಾರರು ರಸ್ತೆಯ ಕೊನೆಯ ಲೇನ್‌ಗಳನ್ನು ಬಳಸುತ್ತಿಲ್ಲ. ಅಲ್ಲದೇ ಕಾಮಗಾರಿ ತ್ಯಾಜ್ಯದಿಂದ ರಸ್ತೆ ಕಿರಿದಾಗಿದೆ.

ಅತಿ ಹೆಚ್ಚು ಧೂಳು ಇರುವುದರಿಂದ ಪೌರಕಾರ್ಮಿಕರು ಪೊರಕೆಗಳಿಂದ ಇದನ್ನು ಸ್ವಚ್ಛಗೊಳಿಸುವುದು ಕಷ್ಟವಾಗುತ್ತದೆ. ಹಾಗಾಗಿ ಮೆಕ್ಯಾನಿಕಲ್ ಸ್ವೀಪಿಂಗ್ ಮೆಷಿನ್‌ಗಳನ್ನು ಬಳಸಿ ಸ್ವಚ್ಛ ಮಾಡಬೇಕಿದೆ. ಕಳೆದ ಒಂದು ವರ್ಷದಿಂದ ಯಾವೊಬ್ಬ ಪೌರಕಾರ್ಮಿಕ ರಸ್ತೆ ಗುಡಿಸುವುದನ್ನು ನಾವು ನೋಡಿಲ್ಲ ಎಂದು ಸ್ಥಳೀಯ ಅಂಗಡಿ ಮಾಲೀಕರು ದೂರಿದ್ದಾರೆ.

''ಧೂಳಿನಿಂದಾಗಿ ವಾಯು ಮಾಲಿನ್ಯ ಹೆಚ್ಚಾಗಿದೆ. ಮರಳಿನ ಕಾರಣ ದ್ವಿಚಕ್ರ ವಾಹನದೊಂದಿಗೆ ಸ್ಕಿಡ್ ಆಗಿ ನಾನು ಬೀಳುವವನಿದ್ದೆ. ಆದರೆ ಸ್ವಲ್ಪದರಲ್ಲೇ ಬಚಾವಾದೆ. ಮುಖ್ಯ ರಸ್ತೆಯೇ ಈ ರೀತಿ ಅಧ್ವಾನವಾಗಿ, ನಿರ್ವಹಿಸದೇ ಪಾಲಿಕೆ ಬಿಟ್ಟರೇ, ಇನ್ನು ವಾರ್ಡ್ ರಸ್ತೆಗಳ ಗತಿಯೇನು,'' ಎಂದು ಕೋರಮಂಗಲದ ನಿವಾಸಿ ಸುದರ್ಶನ್ ಡಿ. ಬೇಸರ ವ್ಯಕ್ತಪಡಿಸಿದರು.

### 23.50 ಕೋಟಿ ರೂ. ಯೋಜನೆ

23.50 ಕೋಟಿ ರೂ. ವೆಚ್ಚದಲ್ಲಿ ದೊಮ್ಮಲೂರು ಮೇಲ್ಸೇತುವೆ ಮತ್ತು ಈಜಿಪುರ ಜಂಕ್ಷನ್ ನಡುವಿನ 2.15 ಕಿ.ಮೀ ಉದ್ದದ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಗೆ ಬಿಬಿಎಂಪಿ ವತಿಯಿಂದ ಸಿದ್ಧತೆ ನಡೆದಿದೆ. ಆದರೆ ಕೋರಮಂಗಲ ಮೇಲ್ಸೇತುವೆ ಸಂಚಾರಕ್ಕೆ ಮುಕ್ತವಾಗುವವರೆಗೂ ವೈಟ್ ಟಾಪಿಂಗ್ ಕಾಮಗಾರಿಯನ್ನು ಮುಂದೂಡಬೇಕು ಎಂದು ಕೆಲವು ವಾಹನ ಸವಾರರು ಒತ್ತಾಯಿಸಿದ್ದಾರೆ. ''ವೈಟ್ ಟಾಪಿಂಗ್ ಕಾಮಗಾರಿಗಾಗಿ ರಸ್ತೆಯನ್ನು ಮುಚ್ಚುವ ಬದಲು, ರಸ್ತೆಯನ್ನು ತಕ್ಷಣವೇ ಗುಂಡಿ ಮುಕ್ತವಾಗಿಸಬೇಕಿದೆ. ಮುಖ್ಯವಾಗಿ ಮೇಲ್ಸೇತುವೆ ಕಾಮಗಾರಿ ನಡೆಯುವ ಭಾಗದಲ್ಲಿ ರಸ್ತೆ ಗುಂಡಿಗಳನ್ನು ಬಿಬಿಎಂಪಿ ಮುಚ್ಚಬೇಕು,'' ಎಂದು ಫುಡ್ ಡೆಲಿವರಿ ಬಾಯ್ ಯೋಗೇಶ್ ಆಗ್ರಹಿಸಿದ್ದಾರೆ.

### ವೈಟ್ ಟಾಪಿಂಗ್ ಕಾಮಗಾರಿ ಬಾಕಿ

''ಈ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುವುದು ಬಾಕಿ ಇರುವುದರಿಂದ ರಸ್ತೆ ಸ್ವಚ್ಛಗೊಳಿಸುವುದನ್ನು ನಿಲ್ಲಿಸಲಾಗಿದೆ. ಈ ಹಿಂದೆ ಈ ರಸ್ತೆಯ ನಿರ್ವಹಣೆ ಜವಾಬ್ದಾರಿ ಬಿಬಿಎಂಪಿಯ ಪ್ರಮುಖ ರಸ್ತೆಗಳ ಇಲಾಖೆಗೆ ಸೇರಿತ್ತು. ಸದ್ಯ ಇದನ್ನು ಕೇಂದ್ರ ಯೋಜನೆಗಳ ಇಲಾಖೆಗೆ ವರ್ಗಾಯಿಸಿದ್ದು, ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಿದೆ,'' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

VK ವಿಜಯ ಕರ್ನಾಟಕ

# 200 ಮಂದಿಗೆ ಕೊರೊನಾ ಸೋಂಕು

**ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಸೋಮವಾರ ಹೊಸದಾಗಿ 200 ಮಂದಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ. ಕೋವಿಡ್ ಪೀಡಿತರಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಇದು ವರೆಗೆ 3,97,333 ಸೋಂಕಿತ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 3,88,510 ಮಂದಿ ಚೇತರಿಸಿಕೊಂಡಿದ್ದಾರೆ. ಉಳಿದ 4380 ರೋಗಿಗಳು ನಿಗದಿತ ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

**7622 ಮಂದಿಗೆ ಲಸಿಕೆ ವಿತರಣೆ:** ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಮವಾರ 7622 ಮಂದಿ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲಾಯಿತು.

ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳ 221 ಕೇಂದ್ರಗಳಲ್ಲಿ 19,457 ಫಲಾನುಭವಿಗಳಿಗೆ ಲಸಿಕೆ ನೀಡಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಆದರೆ, 7622 ಮಂದಿಯಷ್ಟೇ ಹಾಜರಾಗಿ (ಶೇ 38) ಲಸಿಕೆ ಪಡೆದುಕೊಂಡರು.

ವಿಜಯವಾಣಿ
ಕನ್ನಡಿಗರ ಧ್ವನಿ

# ಇವಿಎಂ ವಂಚನೆ ಸಾಬೀತಾಗಿಲ್ಲ

## ಸಿಎಸ್ ಪಿ. ರವಿಕುಮಾರ್ ಹೇಳಿಕೆ » 11ನೇ ರಾಷ್ಟ್ರೀಯ ಮತದಾರರ ದಿನಾಚರಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಕಳೆದ 20 ವರ್ಷಗಳಿಂದ ಮತದಾನಕ್ಕಾಗಿ ಎಲೆಕ್ಟ್ರಾನಿಕ್ ವೋಟಿಂಗ್ ಮಷಿನ್ (ಇವಿಎಂ) ಬಳಸುತ್ತಿದ್ದರೂ, ಸೋತವರು ಇವಿಎಂ ಸರಿಯಾಗಿಲ್ಲ ಎಂದು ಆರೋಪಿಸುತ್ತಾರೆ. ಆದರೆ, ಈವರೆಗೆ ಯಾರೊಬ್ಬರೂ ಲೋಪ ಸಾಬೀತು ಮಾಡಲು ಮುಂದೆ ಬಂದಿಲ್ಲ ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಹೇಳಿದ್ದಾರೆ.

ನಗರದ ಪುರಭವನದಲ್ಲಿ ಸೋಮವಾರ ಏರ್ಪಡಿಸಿದ್ದ 11ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ದೇಶದ ಜನಸಂಖ್ಯೆಗೆ ಅನುಗುಣವಾಗಿ ಮತದಾನ ಪ್ರಕ್ರಿಯೆ ನಡೆಸಲು ಇವಿಎಂ ಸೂಕ್ತವಾಗಿವೆ. ಆದರೆ, ಯಂತ್ರಗಳಲ್ಲಿ ಮತಗಳನ್ನು ತಿರುಚುವ ಬಗ್ಗೆ ಆರೋಪಿಸುವವರು ಈವರೆಗೂ ಸಾಬೀತು ಮಾಡಿಲ್ಲ. ಹೀಗಾಗಿ ಈ ಬಗೆಗಿನ ಊಹಾಪೋಹಗಳನ್ನು ಜನಮನದಿಂದ ದೂರ ಮಾಡಬೇಕಿದೆ ಎಂದು ಸಲಹೆ ನೀಡಿದರು.

**ಜನಮನದಿಂದ ಊಹಾಪೋಹ ದೂರ ಮಾಡಬೇಕಿದೆ**

ರಾಜ್ಯ ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್ ಕುಮಾರ್ ಮಾತನಾಡಿ, ಚುನಾವಣಾ ಆಯೋಗದ ಇ-ಎಪಿಕ್ (ಡಿಜಿಟಲ್ ಗುರುತಿನ ಚೀಟಿ) ಕಾರ್ಡ್ ಮತದಾನಕ್ಕೆ ಸೀಮಿತವಾದ ಗುರುತಿನ ಚೀಟಿಯಾಗಿದ್ದು, ಯಾವುದೇ ಅಧಿಕೃತ ದಾಖಲೆಯಲ್ಲ. ಆದರೂ, ಕೆಲವೆಡೆ ಅನ್ಯಕಾರ್ಯಕ್ಕೆ ಬಳಸುತ್ತಿರುವ ದೂರುಗಳು ಬಂದಿವೆ. ಇ-ಎಪಿಕ್ ಹೆಸರಲ್ಲಿ ಕೆಲವೆಡೆ ವಂಚನೆ ಜಾಲ ಕಂಡುಬರುತ್ತಿದ್ದು, ಪತ್ತೆಹಚ್ಚಿ ಶಿಸ್ತು ಕ್ರಮವಹಿಸಲಾಗುತ್ತಿದೆ ಎಂದರು.

ಮತದಾನದ ಜಾಗೃತಿ ಹಾಗೂ ಮಕ್ಕಳಲ್ಲಿ ಮತದಾನ ಕುರಿತ ಜ್ಞಾನ ಪರೀಕ್ಷೆಗೆ ನಡೆಸಿದ ವಿವಿಧ ವಿಭಾಗಗಳ ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಸಾರ್ವಜನಿಕರಿಗೆ ಅರಿವು ಮೂಡಿಸಲು ಕೆಲಸ ಮಾಡಿದ ಸಂಘ- ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮತದಾನ ಜಾಗೃತಿ ಕುರಿತು ಕಿರುನಾಟಕ ಪ್ರದರ್ಶನ ನಡೆಯಿತು. 18 ವರ್ಷ ತುಂಬಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಿಕೊಂಡಿದ್ದ ಯುವಕ-ಯುವತಿಯರಿಗೆ ಸಾಂಕೇತಿಕವಾಗಿ ಮತದಾರರ ಗುರುತಿನ ಚೀಟಿ ನೀಡಲಾಯಿತು.

**ಪ್ರಸ್ತುತ 5 ಲಕ್ಷ ಯುವ ಮತದಾರು ಹೊಸದಾಗಿ ಸೇರ್ಪಡೆಯಾಗಿದ್ದು, ರಾಜ್ಯದಲ್ಲಿ ಮತದಾರರ ಸಂಖ್ಯೆ 5.21 ಕೋಟಿಗೆ ಏರಿಕೆಯಾಗಿದೆ. ಕೋವಿಡ್ ವೇಳೆ ನಡೆದ ಎಲ್ಲ ಉಪ ಚುನಾವಣೆಗಳು ಯಶಸ್ವಿಯಾಗಿವೆ. ಮತದಾರರ ಸಮಸ್ಯೆ ಆಯೋಗದ ವೆಬ್‌ಸೈಟ್ ಅಥವಾ ಸಹಾಯವಾಣಿಗೆ (1950) ಕರೆ ಮಾಡಬಹುದು.**

| ಡಾ. ಸಂಜೀವ್‌ಕುಮಾರ್
ರಾಜ್ಯ ಮುಖ್ಯ ಚುನಾವಣಾಧಿಕಾರಿ



ಪುರಭವನದಲ್ಲಿ ಯುವ ಮತದಾರರಿಗೆ ವೋಟರ್ ಐಡಿ ಕಾರ್ಡ್ ನೀಡಲಾಯಿತು. ಮುಖ್ಯ ಕಾರ್ಯದರ್ಶಿ ರವಿಕುಮಾರ್, ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್‌ಕುಮಾರ್ ಇತರರಿದ್ದರು.

### ಉತ್ತಮ ಚುನಾವಣಾ ಅಧಿಕಾರಿ ಪ್ರಶಸ್ತಿ

ಚುನಾವಣಾ ಪ್ರಕ್ರಿಯೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಬಿಬಿಎಂಪಿ ಆಯುಕ್ತ ಹಾಗೂ ಬೆಂಗಳೂರು ನಗರ ಜಿಲ್ಲಾ ಚುನಾವಣಾಧಿಕಾರಿ ಎನ್. ಮಂಜುನಾಥಪ್ರಸಾದ್, ಉತ್ತರ ಕನ್ನಡ ಜಿಲ್ಲೆ ಚುನಾವಣಾಧಿಕಾರಿ ಡಾ. ಹರೀಶ್ ಕುಮಾರ್, ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಜುಲ್ಫಿಕರ್ ಉಲ್ಲಾ ಮತ್ತು ಹಿಂದಿನ ಸಿಇಒ ಕೆ. ಯಾಲಕ್ಕಿಗೌಡ, ಕಾರವಾರ ಉಪ ಚುನಾವಣಾಧಿಕಾರಿ ಎಚ್.ಕೆ. ಕೃಷ್ಣಮೂರ್ತಿ, ಕೊಪ್ಪಳ ಉಪ ವಿಭಾಗ ಮತದಾರರ ನೋಂದಣಾಧಿಕಾರಿ ನಾರಾಯಣರೆಡ್ಡಿ, ಅಥಣಿ ತಾಲೂಕಿನ ಮತದಾರರ ಸಹಾಯಕ ನೋಂದಣಾಧಿಕಾರಿ ದೊಂಡಪ್ಪ ಕೋಮಾರ್ ಅವರಿಗೆ 2021ರ ಉತ್ತಮ ಚುನಾವಣಾಧಿಕಾರಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಚುನಾವಣಾ ಆಯೋಗದ ರಾಜ್ಯ ನೋಡಲ್ ಅಧಿಕಾರಿ ಶ್ರೀವಸ್ತದ್, ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್, ವಿಶೇಷ ಆಯುಕ್ತ ಜೆ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

### ದೇಶದ ಯಾವ ಭಾಗದಲ್ಲಿದ್ದರೂ ಮತದಾನ ಮಾಡಲು ಅವಕಾಶ

ದೇಶದಲ್ಲಿ ಯಾವುದೇ ಭಾಗದಲ್ಲಿ ದುಡಿಯಲು ವಲಸೆ ಹೋಗಿರುವ ಕಾರ್ಮಿಕರು, ತಮ್ಮ ಮತ ಚಲಾವಣೆಗೆ ಅನುಕೂಲವಾಗುವಂತೆ ಕೇಂದ್ರ ಚುನಾವಣಾ ಆಯೋಗ ಹೊಸ ವ್ಯವಸ್ಥೆ ಜಾರಿಗೊಳಿಸುತ್ತಿದೆ. ಈ ಹೊಸ ಪರಿಕಲ್ಪನೆ ಪ್ರಕ್ರಿಯೆ ಹಂತದಲ್ಲಿದ್ದು ದೇಶದ ಯಾವುದೇ ಭಾಗದಲ್ಲಿದ್ದರೂ ಮತದಾನ ಮಾಡುವ ಅವಕಾಶ ಲಭಿಸಲಿದೆ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮಾಹಿತಿ ನೀಡಿದರು.

### ನಗರದಲ್ಲಿ 94 ಲಕ್ಷ ಮತದಾರರು

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿ 93.75 ಲಕ್ಷ ಮತದಾರರಿದ್ದಾರೆ. 8,500 ಮತಗಟ್ಟೆಗಳಿವೆ. ಚುನಾವಣೆಗಾಗಿ ವರ್ಷವಿಡೀ ಮತಗಟ್ಟೆ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಹೀಗಾಗಿ, ಚುನಾವಣಾ ಆಯೋಗ ನೀಡಿರುವ ಪ್ರಶಸ್ತಿ ಬಿಬಿಎಂಪಿ ಸಿಬ್ಬಂದಿಗೆ ಸಂದ ಗೌರವವಾಗಿದೆ. ಈ ವರ್ಷ ಚುನಾವಣಾ ಆಯೋಗವು 'ನಮ್ಮ ಮತದಾರರನ್ನು ಅಧಿಕಾರಯುತ, ಜಾಗೃತ, ಸುರಕ್ಷಿತ ಮತ್ತು ಮಾಹಿತಿಯುಕ್ತರನ್ನಾಗಿ ಮಾಡುವುದು' ಎಂಬ ಧ್ಯೇಯ ಹೊಂದಿದ್ದು, ಇದನ್ನು ಸಾಧಿಸಲು ಶ್ರಮಿಸಲಾಗುತ್ತದೆ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

# ಕೋವಿಡ್‌ನಿಂದ 747 ಮಂದಿ ಗುಣಮುಖ

**ಬೆಂಗಳೂರು:** ರಾಜಧಾನಿಯಲ್ಲಿ ಸೋಮವಾರ 200 ಹೊಸ ಕೋವಿಡ್ ಪ್ರಕರಣ ಪತ್ತೆಯಾಗಿದ್ದು, 747 ಮಂದಿ ಸೋಂಕುಮುಕ್ತರಾಗಿದ್ದಾರೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,97,333ಕ್ಕೆ ಏರಿಕೆಯಾಗಿದ್ದು, ಈವರೆಗೆ 3,88,510 ಮಂದಿ ಗುಣಮುಖರಾಗಿದ್ದಾರೆ. 4,442 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 70 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿಗೆ ಸೋಮವಾರ ಒಬ್ಬರು ಬಲಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,380ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

» **ಸೋಮವಾರ ಒಬ್ಬ ಸಾವು**

**7,622 ಸಿಬ್ಬಂದಿಗೆ ಲಸಿಕೆ:** ನಗರದಲ್ಲಿ ಸೋಮವಾರ 221 ಕೋವಿಡ್ ಲಸಿಕಾ ಕೇಂದ್ರದಲ್ಲಿ 7,622 ಆರೋಗ್ಯ ಕಾರ್ಯಕರ್ತರು ಲಸಿಕೆ ಪಡೆದುಕೊಂಡಿದ್ದಾರೆ. ರಾಜಧಾನಿಯಲ್ಲಿ ಕೋವಿಡ್ ಲಸಿಕೆ ಅಭಿಯಾನ ಆರಂಭವಾಗಿ 10 ದಿನ ಪೂರೈಸಿದೆ. ಈ ಪೈಕಿ ಸೋಮವಾರ ಸರ್ಕಾರದ 47 ಹಾಗೂ ಖಾಸಗಿ ಆಸ್ಪತ್ರೆಯ 174 ಲಸಿಕಾ ಕೇಂದ್ರಗಳಲ್ಲಿ ಒಟ್ಟು 19,457 ಆರೋಗ್ಯ ಸಿಬ್ಬಂದಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿತ್ತು. ಈ ಪೈಕಿ ಸರ್ಕಾರಿ ಮತ್ತು ಬಿಬಿಎಂಪಿ ಆಸ್ಪತ್ರೆಯ 1,560 ಹಾಗೂ ಖಾಸಗಿ ಆಸ್ಪತ್ರೆಯ 6,062 ಸೇರಿ ಶೇ.38 ಆರೋಗ್ಯ ಕಾರ್ಯಕರ್ತರು ಮಾತ್ರ ಲಸಿಕೆ ಪಡೆದುಕೊಂಡಿದ್ದಾರೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಉದಯವಾಣಿ
ಜನಮನದ ಜೀವನಾಡಿ

### ಅಕ್ವೇರಿಯಂಗಳ ನೀರು ಶುದ್ಧೀಕರಣ ಮಾದರಿ 'ಡಿಫ್ಯೂಸ್ ಎರಿಯೇಟರ್' ಅಳವಡಿಕೆ

# ಕೆರೆಗಳ ಶುದ್ಧೀಕರಣಕ್ಕೆ ವಿನೂತನ ಯೋಜನೆ

**ಬೆಂಗಳೂರು:** ಪಾಲಿಕೆ ವ್ಯಾಪ್ತಿಯ ಕೆರೆಗಳಲ್ಲಿರುವ ಜಲಚರಗಳು ಹಾಗೂ ಜೀವವೈವಿಧ್ಯತೆಯ ರಕ್ಷಣೆ ಮತ್ತು ಕೆರೆಗಳ ಸ್ವಚ್ಛತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕೆರೆಗಳಲ್ಲಿ 'ಡಿಫ್ಯೂಸ್ ಎರಿಯೇಟರ್'(ಕೊಳಚೆ ನೀರು, ಪಾಚಿ ಸ್ವಚ್ಛತಾ ಯಂತ್ರ)ಗಳನ್ನು ಅಳವಡಿಸಲು ಯೋಜನೆ ರೂಪಿಸಲಾಗುತ್ತಿದೆ. ಪ್ರಾಯೋಗಿಕವಾಗಿ ನಗರದ ಹಲಸೂರು ಕೆರೆಯಲ್ಲಿ ಈ ಯಂತ್ರವನ್ನು ಅಳವಡಿಸಿ ಶುಚಿಗೊಳಿಸುವ ಕಾರ್ಯ ನಡೆಯಿತು.

ಡಿಫ್ಯೂಸ್ ಎರಿಯೇಟರ್‌ಯಂತ್ರ ಅಕ್ವೇರಿಯಂನಲ್ಲಿ ನೀರು ಶುದ್ಧೀಕರಣ ಮಾಡುವ ಮಾದರಿಯಲ್ಲೇ ಕಾರ್ಯನಿರ್ವಹಿಸಲಿದೆ. ಇದರಿಂದ ಕೆರೆಗಳಲ್ಲಿ ಪಾಚಿ ಹಾಗೂ ಕೊಳಚೆ ಅಂಶಗಳು ಶುದ್ಧೀಕರಣವಾಗಲಿದೆ. ಪ್ರಾಯೋಗಿಕವಾಗಿ 30ದಿನಗಳ ಕಾಲಕ್ಕೆ ಹಲಸೂರು ಕೆರೆಯಲ್ಲಿ ಅಳವಡಿಸಲಾಗಿದೆ.

ಈ ಕುರಿತು 'ಉದಯವಾಣಿ'ಯೊಂದಿಗೆ ಮಾತನಾಡಿದ ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಟಿ. ಮೋಹನ್ ಕೃಷ್ಣ ಅವರು, ನಗರದಲ್ಲಿರುವ ಕೆರೆಗಳಲ್ಲಿ 'ಬಯೋರೆಮಿಡಿಯೇಷನ್' ವಿಧಾನದ ಮಾದರಿಯಲ್ಲಿ ಡಿಫ್ಯೂಸ್ ಎರಿಯೇಟರ್ ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಈ ಯಂತ್ರವು ಕೆರೆಯ ಕೆಳಭಾಗದ ನೀರು ಮೇಲಕ್ಕೆ ಹಾಗೂ ಮೇಲ್ಭಾಗದ ನೀರು ಕೆಳಕ್ಕೆ ಚಕ್ರದ ಮಾದರಿಯಲ್ಲಿ ತಿರುಗಿಸುತ್ತದೆ. ಸಹಜವಾಗಿ ಕೆರೆಯ ಮೇಲ್ಭಾಗದ ನೀರಿನಲ್ಲಿ ಆಕ್ಸಿಜನ್ ಅಂಶ ಹೆಚ್ಚಾಗಿದ್ದು, ಕೆರೆಯ ಕೆಳಭಾಗದಲ್ಲಿ ನೀರಿನಲ್ಲಿ ಆಕ್ಸಿಜನ್ ಪ್ರಮಾಣ ಕಡಿಮೆಯಾಗಿರುತ್ತದೆ. ಚಕ್ರದ ಮಾದರಿಯಲ್ಲಿ ನೀರು ಮೇಲಕ್ಕೆ ಬಂದಾಗ ಕೆರೆಯಲ್ಲಿ ಒಟ್ಟಾರೆ ಆಕ್ಸಿಜನ್ ಪ್ರಮಾಣ ಹೆಚ್ಚಾಗುತ್ತದೆ. ಇದರಿಂದ ಕೆರೆಗಳಲ್ಲಿರುವ ಜಲಚರಗಳು ಹಾಗೂ ಜೀವವೈವಿಧ್ಯತೆಗೆ ನೆರವಾಗಲಿದೆ ಎಂದರು.



ನಗರದ ಹಲಸೂರು ಕೆರೆಯಲ್ಲಿ ಪ್ರಾಯೋಗಿಕವಾಗಿ ಡಿಫ್ಯೂಸ್ ಎರಿಯೇಟರ್ ಯಂತ್ರವನ್ನು ಅಳವಡಿಸಿರುವುದು.

ಅಲ್ಲದೆ, ಕೆರೆಗಳಲ್ಲಿರುವ ಪಾಚಿ, ಕೊಳಚೆ ಹಾಗೂ ಅನುಪಯುಕ್ತ ಬ್ಯಾಕ್ಟೀರಿಯಾಗಳನ್ನು ತಿಂದು ಅಥವಾ ಸಂಗ್ರಹಿಸಿಕೊಂಡು ನೀರು ಶುದ್ಧೀಕರಣ ಮಾಡುತ್ತದೆ. ಈ ರೀತಿ ಕೆರೆಗಳಲ್ಲಿ ಕೊಳಚೆ ಅಂಶ ಶುದ್ಧೀಕರಣ ಆಗುವುದರಿಂದಾಗಿ ಕೆರೆಗಳಲ್ಲಿ ಆಕ್ಸಿಜನ್ ಪ್ರಮಾಣ ಹೆಚ್ಚಾಗುವುದರ ಜತೆಗೆ ಕೆರೆಯೂ ಸ್ವಚ್ಛವಾಗುತ್ತದೆ. ಹಲಸೂರು ಕೆರೆಯಲ್ಲಿ ಅಳವಡಿಸಲಾಗಿರುವ ಡಿಫ್ಯೂಸ್ ಎರಿಯೇಟರ್‌ಯಂತ್ರದ ಮೂಲಕ ಪ್ರತಿ ಗಂಟೆಗೆ 1.2 ಎಂ.ಎಲ್‌ಡಿ ನೀರು ಶುದ್ಧವಾಗಲಿದೆ. ಮುಂದಿನ ದಿನಗಳಲ್ಲಿ ಮಡಿವಾಳ ಹಾಗೂ ಸ್ಯಾಂಕಿ ಕೆರೆಗಳಲ್ಲಿ ಈ ಯಂತ್ರವನ್ನು ಅಳವಡಿಸುವ ಯೋಜನೆ ಇದೆ ಎಂದು ಮಾಹಿತಿ ನೀಡಿದರು.

**ಏನಿದು ಬಯೋರೆಮಿಡಿಯೇಷನ್ ?:** ನಿರ್ದಿಷ್ಟ ಕೆರೆಯಲ್ಲಿನ ತಳಮಟ್ಟದ ನೀರಿನ ಗುಣಮಟ್ಟವನ್ನು ಹೆಚ್ಚಿಸುವ ವಿಧಾನವನ್ನು ಬಯೋರೆಮಿಡಿಯೇಷನ್ ವಿಧಾನವಾಗಿದೆ. ಇದರ ಮೂಲಕ ಕೆರೆಯ ತಳಮಟ್ಟದ ಕೊಳಚೆ ನೀರು ಹಾಗೂ ಪಾಚಿ ಅಂಶಗಳನ್ನು ಶುದ್ಧೀಕರಣ ಮಾಡಲಾಗುತ್ತದೆ. ಕೆರೆಯ ನೀರು ಮೇಲಿಂದ ಕೆಳಕ್ಕೆ ಹಾಗೂ ಕೆಳಗಿನಿಂದ ಮೇಲಕ್ಕೆ ಚಕ್ರದ ಮಾದರಿಯಲ್ಲಿ ಬರುತ್ತದೆ. ಇದೇ ವೇಳೆ ಕೆರೆಯ ತಳಮಟ್ಟದಲ್ಲಿರುವ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಇಳಿಕೆಯಾಗಿ ಕೆರೆಯ ಗುಣಮಟ್ಟವೂ ಸುಧಾರಿಸುತ್ತದೆ ಎನ್ನುತ್ತಾರೆ ಪಾಲಿಕೆಯ ಕೆರೆ ವಿಭಾಗದ ಅಧಿಕಾರಿಗಳು.

ಉದಯವಾಣಿ
ಜನಮನದ ಜೀವನಾಡಿ

# ಚುನಾವಣೆ ಗಂಭೀರತೆ ಜನರಿಗೆ ತಿಳಿದಿಲ್ಲ

## ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅಭಿಮತ ■ ಆಯುಕ್ತ ಮಂಜುನಾಥ್ ಪ್ರಸಾದ್‌ಗೆ ಪ್ರಶಸ್ತಿ

**ಬೆಂಗಳೂರು:** ಭಾರತದಲ್ಲಿ ಚುನಾವಣೆಯ ಬಗ್ಗೆ ಜನ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಪ್ರತಿಯೊಂದು ಚುನಾವಣೆಯ ಪ್ರಕ್ರಿಯೆ ಬಹಳ ಕಠಿಣವಾಗಿದ್ದು, ಚುನಾವಣೆ ನಡೆಸುವುದರ ಹಿಂದೆ ಹಲವು ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪರಿಶ್ರಮವಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಹೇಳಿದರು.

ನಗರದ ಟೌನ್ ಹಾಲ್‌ನಲ್ಲಿ ಚುನಾವಣಾ ಆಯೋಗ ಹಾಗೂ ಬಿಬಿಎಂಪಿ ಸೋಮವಾರ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಮತದಾರರ ದಿನಾಚರಣೆ -2021'ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳು ಹಲವು ಜವಾಬ್ದಾರಿಗಳನ್ನು ನಿಭಾಯಿಸುತ್ತಾರೆ. ಇದರ ಬಗ್ಗೆ ಹಲವರಿಗೆ ತಿಳಿದಿಲ್ಲ. 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಮತದಾನ ಮಾಡುವ ಹಕ್ಕು ಸಿಗಲಿದೆ. ಅಲ್ಲದೆ, ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವ ವಿಧಾನವನ್ನೂ ಸರಳೀಕರಿಸಲಾಗಿದ್ದು, ಚುನಾವಣಾ ಆಯೋಗದ ವೆಬ್‌ಸೈಟ್‌ನ ಮೂಲಕ ಮತದಾರರ ಗುರುತಿನ ಚೀಟಿ ಪಡೆಯಬಹುದು. ರಾಜ್ಯದಲ್ಲಿ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡುತ್ತಿದ್ದಾರೆ ಎಂದರು.

**ಇವಿಎಂಗಳ ಬಗ್ಗೆ ಊಹಾಪೋಹಗಳಿಗೆ ಕಿವಿಗೊಡಬೇಡಿ:** ರಾಜ್ಯದಲ್ಲಿ 20 ವರ್ಷಗಳಿಂದಲೂ ಚುನಾವಣೆ ಸಂದರ್ಭದಲ್ಲಿ ಇವಿಎಂ ಬಳಸಲಾಗುತ್ತಿದೆ. ಇವಿಎಂಗಳಲ್ಲಿ ಇರುವ ಮಾಹಿತಿ ತಿರುಚಲು ಸಾಧ್ಯವಿಲ್ಲ. ಭಾರತದ ಯಾವುದೇ ಭಾಗದ ಇವಿಎಂನಲ್ಲೂ ಲೋಪವಿಲ್ಲ. ಹೀಗಾಗಿ, ಸಾರ್ವಜನಿಕರು ಅನವಶ್ಯಕ ಊಹಾಪೋಹಗಳಿಗೆ ಕಿವಿಗೊಡಬೇಡಿ ಎಂದರು.

ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್ ಕುಮಾರ್ ಮಾತನಾಡಿ, ರಾಷ್ಟ್ರೀಯ ಮತದಾರರ ದಿನಾಚರಣೆಯ ಮುಖ್ಯ ಉದ್ದೇಶ ಮತದಾರರು ಹಾಗೂ ಭಾವಿ ಮತದಾರರಿಗೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವ ಹಾಗೂ ಅದರ ಮಹತ್ವದ ಬಗ್ಗೆ ಅರಿವು ಮೂಡಿಸುವುದಾಗಿದೆ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರು ಪ್ರಮುಖವಾಗಿದ್ದು, ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿ ಮತದಾನದ ಹಕ್ಕನ್ನು ಚಲಾಯಿಸಬೇಕು. ಮತದಾರರ ಸಲಹೆ ಹಾಗೂ ದೂರುಗಳಿಗೆ ಉಚಿತ ದೂರವಾಣಿ ಸಂಖ್ಯೆ 1950(ಮತದಾರರ ಸಹಾಯವಾಣಿ)ಗೆ ಕರೆಮಾಡಬಹುದು ಎಂದು ಹೇಳಿದರು.



ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರಿಗೆ 2020-21ನೇ ಸಾಲಿನ ಉತ್ತಮ ಚುನಾವಣಾಧಿಕಾರಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

### ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ಪ್ರದಾನ

ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರಿಗೆ 2020-21ನೇ ಸಾಲಿನ ಉತ್ತಮ ಚುನಾವಣಾಧಿಕಾರಿ ಪ್ರಶಸ್ತಿ ನೀಡಿ ಸನ್ಮಾನ ಮಾಡಲಾಯಿತು. ಕೋವಿಡ್ ಸಮಯದಲ್ಲೂ ರಾಜರಾಜೇಶ್ವರಿ ನಗರ ಉಪ ಚುನಾವಣೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕಾಗಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಈ ವೇಳೆ ಮಾತನಾಡಿದ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಅವರು, ನಗರದಲ್ಲಿ ಒಟ್ಟು 1.30 ಕೋಟಿ ಜನರಿದ್ದು, ಇವರಲ್ಲಿ 93,75,000 ಮತದಾರರಿದ್ದಾರೆ. ಮತದಾನ ಮಾಡಲು 8,500 ಮತಗಟ್ಟೆಗಳಿವೆ ಎಂದರು.

ನಗರದಲ್ಲಿಯುವ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲು ವಿಶೇಷ ಯೋಜನೆ ರೂಪಿಸಿಕೊಳ್ಳಲಾಗಿದ್ದು ಈ ಬಾರಿ 65 ಸಾವಿರ ಹೊಸ ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆ ಆಗಿದ್ದಾರೆ. ಹೀಗಾಗಿ, ನನಗೆ ಸಿಕ್ಕ ಪ್ರಶಸ್ತಿ ಶ್ರೇಯಸ್ಸು ಪಾಲಿಕೆಯ ಚುನಾವಣಾ ಪ್ರಕ್ರಿಯೆಯಲ್ಲಿ ಕಾರ್ಯನಿರ್ವಹಿಸಿದ ಪ್ರತಿಯೊಬ್ಬರಿಗೂ ಸಲ್ಲುತ್ತದೆ ಎಂದರು.

ಈ ವೇಳೆ ಚುನಾವಣಾ ಸಂದರ್ಭದಲ್ಲಿ ಸೇವೆ ಸಲ್ಲಿಸಿದ ವಿವಿಧ ವಿಭಾಗದ ಅಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಅಲ್ಲದೆ, ಸಾಂಕೇತಿಕವಾಗಿ ಹೊಸ ಮತದಾರರಿಗೆ, ವಿಶೇಷ ಚೇತನರಿಗೆ ಮತದಾರರ ಗುರುತಿನ ಚೀಟಿ ನೀಡಲಾಯಿತು. ಹಿರಿಯ ಐಎಎಸ್ ನಿವೃತ್ತ ಅಧಿಕಾರಿ ಹಾಗೂ ಚುನಾವಣಾ ಆಯೋಗದ ರಾಜ್ಯ ನೋಡಲ್ ಅಧಿಕಾರಿ ವಸ್ತಾದ್ ಹಾಗೂ ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ) ಜೆ.ಮಂಜುನಾಥ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಉದಯವಾಣಿ
ಜನಮನದ ಜೀವನಾಡಿ

# 7,622 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ

**ಬೆಂಗಳೂರು:** ನಗರದಲ್ಲಿ ಸೋಮವಾರ 7,622 ಜನ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ಪಾಲಿಕೆ ಹಾಗೂ ಸರ್ಕಾರಿ ಕೋವಿಡ್ ಲಸಿಕಾ ಕೇಂದ್ರ ಸೇರಿ 47 ಹಾಗೂ ಖಾಸಗಿಯ 174 ಲಸಿಕಾ ಕೇಂದ್ರ ಸೇರಿ ಒಟ್ಟು 221 ಲಸಿಕಾ ಕೇಂದ್ರದಲ್ಲಿ 19,457ಜನ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲು ಉದ್ದೇಶಿಸಲಾಗಿತ್ತು. ಇದರಲ್ಲಿ 7,622 ಜನ ಕೋವಿಡ್ ಲಸಿಕೆ ಪಡೆಯುವ ಮೂಲಕ ನಗರದಲ್ಲಿ ಸೋಮವಾರ ಶೇ.38ರಷ್ಟು ಲಸಿಕೆ ಗುರಿ ಸಾಧಿಸಿದಂತಾಗಿದೆ. ಸೋಮವಾರ ಸರ್ಕಾರಿ ಆಸ್ಪತ್ರೆಯ 3,914 ಹಾಗೂ ಖಾಸಗಿ ಆಸ್ಪತ್ರೆಯ 15,543 ಜನರಿಗೆ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಇದರಲ್ಲಿ ಸರ್ಕಾರಿ ಹಾಗೂ ಪಾಲಿಕೆಯ 1,560 ಜನ ಹಾಗೂ ಖಾಸಗಿಯ 6062 ಜನ ಆರೋಗ್ಯ ಕಾರ್ಯಕರ್ತರು ಲಸಿಕೆ ಹಾಕಿಸಿಕೊಂಡಿದ್ದಾರೆ. ಸೋಮವಾರ ಲಸಿಕೆ ಹಾಕಿಸಿಕೊಂಡ ಯಾರಲ್ಲೂ ಅಡ್ಡ ಪರಿಣಾಮ ಕಾಣಿಸಿಕೊಂಡಿಲ್ಲ ಎಂದು ಪಾಲಿಕೆಯ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

# ಶೀಘ್ರ ಲಸಿಕೆ ಎರಡನೇ ಪಟ್ಟಿ ಸಿದ್ಧ

**ಸಂ.ಕ.ಸಮಾಚಾರ ಬೆಂಗಳೂರು**

ಕೇಂದ್ರದಿಂದ ಕೊರೊನಾ ಲಸಿಕೆ ಪಡೆದು ಮುಂಚೂಣಿಯ ವಾರಿಯರ್ಸ್ ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡುವಲ್ಲಿ ಸರ್ಕಾರದ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸಿದ್ದು ಇನ್ನೆರಡು ದಿನದಲ್ಲಿ ಲಸಿಕೆ ನೀಡುವವರ ಎರಡನೇ ಪಟ್ಟಿ ಸಿದ್ಧವಾಗಲಿದೆ ಎಂದು ಪಾಲಿಕೆ ಆಯುಕ್ತ ಮಂಜುನಾಥ್ ಪ್ರಸಾದ್ ಮಾಹಿತಿ ನೀಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಗರದಲ್ಲಿ ಪ್ರತಿದಿನ ಸರಿ ಸುಮಾರು 6 ಸಾವಿರ ಮಂದಿಗೆ ಕೊರೊನಾ ಪರೀಕ್ಷೆ ಮಾಡಲಾಗುತ್ತಿತ್ತು. ಸೋಂಕಿತರ ಸಂಖ್ಯೆ ಹೆಚ್ಚಿದ್ದರಿಂದ ಇದನ್ನು ಪ್ರತಿದಿನ 55 ಸಾವಿರಕ್ಕೆ ಹೆಚ್ಚಿಸಲಾಯಿತು.



ಈಗಲೂ ಸುಮಾರು 35 ಸಾವಿರ ಜನರ ಪರೀಕ್ಷೆ ಮಾಡುತ್ತಿದ್ದೇವೆ. ಸಾವಿನ ಸಂಖ್ಯೆ ಶೂನ್ಯದತ್ತ ಸಾಗಿದೆ. ಇದು ಉತ್ತಮ ಬೆಳವಣಿಗೆ. ಯಾವುದೇ ಕಾರಣಕ್ಕೂ ಟೆಸ್ಟ್ ಕಡಿಮೆ ಮಾಡಿಲ್ಲ ಎಂದು ಹೇಳಿದರು.

ಲಸಿಕೆ ನೀಡುವ ವಿಷಯವಾಗಿ ಮಾತನಾಡಿದ ಅವರು, ಲಸಿಕೆಯನ್ನು ಯಾರಿಗೆ ಅಂದರೆ ಅವರಿಗೆ ಕೊಡಲು ಆಗುವುದಿಲ್ಲ. ಆರೋಗ್ಯ ಕಾರ್ಯಕರ್ತರಿಗೆ ಮಾತ್ರ ಕೊಡಲಾಗುತ್ತದೆ. ಭಾನುವಾರವೂ ಕೂಡಾ ಲಸಿಕೆ ವಿತರಣೆ ನಡೆದಿದೆ. ಮುಂಚೂಣಿ ವಾರಿಯರ್ಸ್ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಈ ಪಟ್ಟಿಯಲ್ಲಿ ಬಿಬಿಎಂಪಿ ಸಿಬ್ಬಂದಿ, ಪೊಲೀಸರು, ಕಂದಾಯ ಇಲಾಖೆ ನೌಕರರ ಪಟ್ಟಿ ತಯಾರಿಸಲಾಗುತ್ತಿದೆ.

ಈಗಾಗಲೇ 20 ಸಾವಿರ ಸಿಬ್ಬಂದಿಗೆ ಲಸಿಕೆ ನೀಡಲಾಗಿದೆ. ಎರಡನೆ ಪಟ್ಟಿಯಲ್ಲಿ ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ 17 ಸಾವಿರ ಮಂದಿಯ ಪಟ್ಟಿ ಸಿದ್ಧಪಡಿಸಲಾಗುತ್ತಿದ್ದು, ಇದರಲ್ಲಿ 10 ಸಾವಿರ ಮಂದಿ ಕಂದಾಯ ಇಲಾಖೆಯಲ್ಲಿ ಇದ್ದಾರೆ. ಲಸಿಕೆ ಬಂದ ಕೂಡಲೇ ಈ ಎಲ್ಲರಿಗೂ ಲಸಿಕೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಸಂಯುಕ್ತ ಕರ್ನಾಟಕ

# 7622 ಮಂದಿಗೆ ಕೊರೊನಾ ಲಸಿಕೆ

**ಬೆಂಗಳೂರು:** ನಗರದಲ್ಲಿ ಸೋಮವಾರ 7,622 ಜನ ಆರೋಗ್ಯ ಕಾರ್ಯಕರ್ತರಿಗೆ ಕೊರೊನಾ ಲಸಿಕೆ ನೀಡಲಾಗಿದೆ.

ಪಾಲಿಕೆ ಹಾಗೂ ಸರ್ಕಾರಿ ಕೋವಿಡ್ ಲಸಿಕಾ ಕೇಂದ್ರ ಸೇರಿ 47 ಹಾಗೂ ಖಾಸಗಿಯ 174 ಲಸಿಕಾ ಕೇಂದ್ರ ಸೇರಿ ಒಟ್ಟು 221 ಲಸಿಕಾ ಕೇಂದ್ರದಲ್ಲಿ 19,457ಜನ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲು ಉದ್ದೇಶಿಸಲಾಗಿತ್ತು. ಇದರಲ್ಲಿ 7,622 ಜನ ಕೋವಿಡ್ ಲಸಿಕೆ ಪಡೆಯುವ ಮೂಲಕ ನಗರದಲ್ಲಿ ಸೋಮವಾರ ಶೇ.38ರಷ್ಟು ಲಸಿಕೆ ಗುರಿ ಸಾಧಿಸಿದಂತಾಗಿದೆ ಎಂದು ಬಿಬಿಎಂಪಿ ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಸೋಮವಾರ ಸರ್ಕಾರಿ ಆಸ್ಪತ್ರೆಯ 3,914 ಹಾಗೂ ಖಾಸಗಿ ಆಸ್ಪತ್ರೆಯ 15,543 ಜನರಿಗೆ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಇದರಲ್ಲಿ ಸರ್ಕಾರಿ ಹಾಗೂ ಪಾಲಿಕೆಯ 1,560 ಜನ ಹಾಗೂ ಖಾಸಗಿಯ 6062 ಜನ ಆರೋಗ್ಯ ಕಾರ್ಯಕರ್ತರು ಲಸಿಕೆ ಹಾಕಿಸಿಕೊಂಡಿದ್ದಾರೆ. ಸೋಮವಾರ ಲಸಿಕೆ ಹಾಕಿಸಿಕೊಂಡ ಯಾರಲ್ಲೂ ಅಡ್ಡಪರಿಣಾಮ ಕಾಣಿಸಿಕೊಂಡಿಲ್ಲ ಎಂದು ತಿಳಿಸಿದ್ದಾರೆ.

ಹೊಸ ದಿಗಂತ
12
26 Jan 2021

# ಲಸಿಕೆಯಿಂದ ಅಡ್ಡ ಪರಿಣಾಮ ಆಗಿಲ್ಲ

**ಬೆಂಗಳೂರು:** ಕೋವ್ಯಾಕ್ಸಿನ್ ಲಸಿಕೆಯಿಂದ ಈವರೆಗೆ ಯಾವುದೇ ದೊಡ್ಡ ಮಟ್ಟದ ಅಡ್ಡ ಪರಿಣಾಮ ಆಗಿಲ್ಲ. ಇದು ಅತ್ಯಂತ ಸುರಕ್ಷಿತ ಲಸಿಕೆಯಾಗಿದ್ದು, ಹೆಚ್ಚು ಜನರು ಇದನ್ನು ಪಡೆಯಬೇಕು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಸಾಮಾನ್ಯರಿಗೆ ನೈತಿಕ ಸ್ಥೈರ್ಯ ತುಂಬಲು ಎರಡನೇ ಹಂತದಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರು ಲಸಿಕೆ ಪಡೆಯಲಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಸುಮಾರು 500 ಸಂಖ್ಯೆಯಷ್ಟು ಗಣ್ಯ ವ್ಯಕ್ತಿಗಳಿಗೆ ಲಸಿಕೆ ನೀಡುವಂತೆ ಕ್ರಮ ವಹಿಸಲು ಪ್ರಧಾನಿಗೆ ಕೋರಲಾಗಿದೆ ಎಂದು ಸಚಿವರು ತಿಳಿಸಿದರು.

## 1.87 ಲಕ್ಷ ಜನರಿಗೆ ಲಸಿಕೆ

ಕೊರೊನಾ ಲಸಿಕೆ ಅಭಿಯಾನದಡಿ ರಾಜ್ಯದಲ್ಲಿ ಈವರೆಗೆ 1,87,211 ಜನರಿಗೆ ಲಸಿಕೆ ನೀಡಲಾಗಿದೆ. 7,94,500 ಡೋಸ್ ಕೋವಿಶೀಲ್ಡ್ ಲಸಿಕೆ ಬಂದಿದೆ. ಕೋವ್ಯಾಕ್ಸಿನ್ ಲಸಿಕೆ ಮೊದಲಿಗೆ 20,000 ಡೋಸ್ ಬಂದಿತ್ತು. ನಂತರ ಮತ್ತೆ 1,46,240 ಡೋಸ್ ಬಂದಿದೆ. ಒಟ್ಟು 1,87,211 ಜನರಿಗೆ ಲಸಿಕೆ ನೀಡಲಾಗಿದೆ.

ಹೊಸ ದಿಗಂತ

ಹೊಸ ದಿಗಂತ



### ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಚುನಾವಣಾಧಿಕಾರಿ ಸಂಜೀವ್‌ಕುಮಾರ್ ಹೇಳಿಕೆ

# ನೀತಿ ಸಂಹಿತೆ ಉಲ್ಲಂಘನೆಗೆ ಸಿ-ವಿಜಿಲ್

**ಬೆಂಗಳೂರು:** ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘನೆಯನ್ನು ತಡೆಯಲು ಸಿ-ವಿಜಿಲ್ ತಂತ್ರಾಂಶ ಸಿದ್ಧಪಡಿಸಲಾಗಿದ್ದು, ಯಾರಾದರು ಸಂಹಿತೆ ಉಲ್ಲಂಘಿಸಿದರೆ ನಾಗರಿಕರು ಆ ಕುರಿತು ಛಾಯಾಚಿತ್ರ, ಧ್ವನಿ, ದೃಶ್ಯಾವಳಿ ಮೂಲಕ ರವಾನಿಸಬಹುದು.

ಈ ಮಾಹಿತಿ ಆಧರಿಸಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತಾರೆ. ಮತದಾರರ ಸಮಸ್ಯೆಗಳನ್ನು ಆಲಿಸಲು 1950(ಓಟರ್ಸ್ ಹೆಲ್ಪ್ ಲೈನ್) ಸಂಖ್ಯೆಗೆ ಶುಲ್ಕ ರಹಿತ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ. ಇಂತಹ ವ್ಯವಸ್ಥೆ ಹೊಸದಾಗಿ ಅಳವಡಿಸಿಕೊಂಡಿದ್ದು, ಮುಂದಿನ ಚುನಾವಣೆಯಿಂದ ಹೆಚ್ಚು ವ್ಯಾಪಕವಾಗಿ ಜಾರಿಗೆ ತರಲು ಮುಖ್ಯ ಚುನಾವಣಾಧಿಕಾರಿ(ಕರ್ನಾಟಕ) ಸಂಜೀವ್‌ಕುಮಾರ್ ತಿಳಿಸಿದರು.

ನಗರದ ಟೌನ್ ಹಾಲ್‌ನಲ್ಲಿ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ



ರಾಜ್ಯ ಮಟ್ಟದ 2020-21 ನೇ ಸಾಲಿನ ಉತ್ತಮ ಜಿಲ್ಲಾ ಅತ್ಯುತ್ತಮ ಚುನಾವಣಾಧಿಕಾರಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್, ರಾಷ್ಟ್ರೀಯ ಮತದಾರರ ದಿನವನ್ನು ಪ್ರತಿ ವರ್ಷವೂ ಒಂದು ಧ್ಯೇಯ ಇಟ್ಟುಕೊಂಡು ಆಚರಿಸಲಾಗುತ್ತದೆ. ಈ ಬಾರಿ ಮತದಾರರಲ್ಲಿ ಶಕ್ತಿ ತುಂಬುವ, ಚುನಾವಣೆ ಪ್ರಕ್ರಿಯೆಲ್ಲಿ ಸತತವಾಗಿ ತೊಡಗಿಸಿಕೊಳ್ಳುವ ಚುನಾವಣೆ ವೇಳೆ ಸುರಕ್ಷತೆಯಿಂದ ಮತದಾನ ಮಾಡುವ ಹಾಗೂ ಚುನಾವಣೆ ಬಗ್ಗೆ ಎಲ್ಲಾ



ರೀತಿಯ ಮಾಹಿತಿ ಮತದಾರರಿಗೆ ನೀಡುವ ವಿಷಯವಾಗಿ ಆಚರಿಸಲಾಗಿದೆ ಎಂದರು. ನಗರದಲ್ಲಿ ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಪಾಲಿಕೆ ಹಲವು ಕಾರ್ಯಕ್ರಮ ರೂಪಿಸಿಕೊಂಡು 65,000 ಹೊಸ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ. ಯಾವುದೇ ಒಂದು ಚುನಾವಣೆ ನಡೆಸಲು ಬೂತ್ ಮಟ್ಟದ ಅಧಿಕಾರಿಗಳು ವರ್ಷವಿಡಿ ಕೆಲಸ ಮಾಡುತ್ತಿರುತ್ತಾರೆ ಎಂದರು.

**ಎಪಿಕ್ ಕಾರ್ಡ್**

**ಚುನಾವಣಾ ಆಯೋಗವು ಇ-ಎಪಿಕ್ (ಡಿಜಿಟಲ್ ಗುರುತಿನ ಚೀಟಿ) ಕಾರ್ಡ್ ಗಳನ್ನು ಬಿಡುಗಡೆ ಮಾಡಿದೆ. ಇದು ಸುರಕ್ಷಿತ ಪೋರ್ಟೆಬಲ್ ಡಾಕ್ಯುಮೆಂಟ್ ಫಾರ್ಮ್ಯಾಟ್ (ಪಿಡಿಎಫ್) ಆವೃತ್ತಿಯಾಗಿದೆ. ಇದನ್ನು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಡೌನ್ಲೋಡ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬಹುದು. ಈಗಿನ ಮಾಹಿತಿ ಪ್ರಕಾರ ಎರಡು ಹಂತಗಳಲ್ಲಿ ಇ-ಎಪಿಕ್ ಕಾರ್ಡ್ ನೀಡಲಾಗುತ್ತಿದೆ. ಇ-ಎಪಿಕ್ ಅನ್ನು ವೋಟರ್ ಹೆಲ್ಪ್‌ಲೈನ್ ಮೊಬೈಲ್ ಆ್ಯಪ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ. ಅಥವಾ https://eci.gov.in ಇಲ್ಲಿಯೂ ಪಡೆದುಕೊಳ್ಳಬಹುದು. ಮೊಬೈಲ್ ಸಂಖ್ಯೆ ಲಿಂಕ್ ಮಾಡಿದವರು ಇ-ಎಪಿಕ್ ಡೌನ್ಲೋಡ್ ಮಾಡಿಕೊಳ್ಳಬಹುದು.**

ಹೊಸ ದಿಗಂತ


# ಕನ್ನಡ ನಾಮಫಲಕ ಅಭಿಯಾನಕ್ಕೆ ಚಾಲನೆ

**ಬೆಂಗಳೂರು:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ ಜ.26ರಿಂದ 28ರ ವರೆಗೆ ರಾಜ್ಯಾದ್ಯಂತ ಶುದ್ಧ ಕನ್ನಡ ನಾಮಫಲಕ ಅಭಿಯಾನ ನಡೆಯಲಿದೆ. ಮಂಗಳವಾರ ಬೆಳಿಗ್ಗೆ 10.3 ಕ್ಕೆ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿರುವ ಕೃಷ್ಣ ಜ್ಯೂವೆಲರಿ ಮುಂಭಾಗದಲ್ಲಿ ಚಾಲನೆ ದೊರೆಯಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ನೇತೃತ್ವದಲ್ಲಿ ಅಭಿಯಾನ ನಡೆಯಲಿದೆ. ರಾಜ್ಯಮಟ್ಟದ ಅಧಿಕಾರೇತರ ಸದಸ್ಯರು, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರು, ಮಹಾನಗರ ಪಾಲಿಕೆ ಸದಸ್ಯರು, ಕನ್ನಡ ಕಾಯಕ ಪಡೆಯ ಸದಸ್ಯರು ಹಾಗೂ ಕನ್ನಡಪರ ಚಿಂತಕರು ಅಭಿಯಾನದಲ್ಲಿ ಭಾಗವಹಿಸಿಲಿದ್ದಾರೆ. ರಾಜ್ಯ ಸರ್ಕಾರದ ಕಚೇರಿ, ಕೇಂದ್ರ ಸರ್ಕಾರದ ಕಚೇರಿಗಳು, ಸಾರ್ವಜನಿಕ ಅಂಗಡಿ ಮುಂಗಟ್ಟುಗಳು, ಶುದ್ಧ ಕನ್ನಡವನ್ನು ನಾಮಫಲಕದಲ್ಲಿ ಬಳಕೆ ಮಾಡಬೇಕು ಎಂದು ಈ ಅಭಿಯಾನವನ್ನು ನಡೆಯಲಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ನಾಗಾಭರಣ ತಿಳಿಸಿದ್ದಾರೆ.

ಹೊಸ ದಿಗಂತ

26 Jan 2021

# 7622 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ



**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಮವಾರ 7622 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ಹಾಕಲಾಗಿದೆ. ನಗರದಲ್ಲಿ 47 ಸರ್ಕಾರಿ ಆಸ್ಪತ್ರೆ, ಮತ್ತು 174 ಖಾಸಗಿ ಆಸ್ಪತ್ರೆಗಳು ಸೇರಿ ಒಟ್ಟು 221 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡಲಾಯಿತು. ಸರ್ಕಾರಿ ಆಸ್ಪತ್ರೆಯ 1560 ಹಾಗೂ ಖಾಸಗಿ ಆಸ್ಪತ್ರೆಯ 6062 ಆರೋಗ್ಯ ಸಿಬ್ಬಂದಿ ಸೇರಿ ಒಟ್ಟು 7622 ಮಂದಿ ಲಸಿಕೆ ಪಡೆದಿದ್ದಾರೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

## 200 ಮಂದಿಗೆ ಸೋಂಕು ದೃಢ

ಬೆಂಗಳೂರು: ನಗರದಲ್ಲಿ ಸೋಮವಾರ 200 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 747 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, ಇಬ್ಬರು ಬಲಿಯಾಗಿದ್ದಾರೆ. ನಗರದಲ್ಲಿ ಒಟ್ಟು 3,97,333 ಸೋಂಕಿತರು ದೃಢಪಟ್ಟಿದ್ದು, ಒಟ್ಟು 4,380 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,88,510 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್-19ಕ್ಕೆ ಮೀಸಲಾದ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 4,442 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

## ರಾಷ್ಟ್ರೀಯ ಮತದಾರರ ದಿನಾಚರಣೆ-2021

# ‘ಇ-ಎಪಿಕ್ ಕಾರ್ಡ್ ಮತದಾನಕ್ಕೆ ಮಾತ್ರ ಸೀಮಿತ’

ಬೆಂಗಳೂರು, ಜ.25: ಚುನಾವಣಾ ಆಯೋಗದ ಇ-ಎಪಿಕ್ (ಡಿಜಿಟಲ್ ಗುರುತಿನ ಚೀಟಿ) ಕಾರ್ಡ್ ಮತದಾನಕ್ಕೆ ಮಾತ್ರ ಸೀಮಿತವಾಗಿದ್ದು, ಇತರ ಕಾರಣಗಳಿಗೆ ಉಪಯೋಗಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಸೋಮವಾರ ಭಾರತ ಚುನಾವಣಾ ಆಯೋಗದ ವತಿಯಿಂದ ನಗರದ ಪುರಭವನದಲ್ಲಿ ಆಯೋಜಿಸಿದ್ದ ‘ರಾಷ್ಟ್ರೀಯ ಮತದಾರರ ದಿನಾಚರಣೆ-2021’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇ-ಎಪಿಕ್ ಚೀಟಿ ಮತದಾನಕ್ಕೆ ಹೊರತುಪಡಿಸಿ ಬೇರೆ ಯಾವುದೇ ರೀತಿಯ ಅಧಿಕೃತ ದಾಖಲೆಯಲ್ಲವೆಂಬುದು ಈಗಾಗಲೇ ದೃಢಪಡಿಸಲಾಗಿದೆ. ಆದರೂ ಕೆಲವೆಡೆ ಈ ಕಾರ್ಡ್ ನ್ನು ಮಾನ್ಯ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಮೊಕದ್ದಮೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ವೇಳೆ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಳೆದ ಚುನಾವಣೆಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳಾದ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳಿಗೆ, ಸಹಾಯಕ ನೋಂದಣಾಧಿಕಾರಿ, ತಹಶಿಲ್ದಾರರುಗಳಿಗೆ ಮತ್ತು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಪ್ರಶಸ್ತಿ ವಿತರಿಸಲಾಯಿತು. ರಾಜ್ಯಮಟ್ಟದ ಸ್ಪರ್ಧೆ ವಿಜೇತರು ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಮತದಾರರ ಸಾಕ್ಷರತಾ ಸಂಘಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ಹೊಸ ಮತದಾರರಿಗೆ, ವಿಕಲ ಚೇತನರಿಗೆ ಹಾಗೂ ಇತರರಿಗೆ ಮತದಾರರ ಗುರುತಿನ ಚೀಟಿ ವಿತರಿಸಲಾಯಿತು.

### ಇ-ಎಪಿಕ್ ಕಾರ್ಡ್

ಚುನಾವಣಾ ಆಯೋಗವು ಇ-ಎಪಿಕ್ ಕಾರ್ಡ್‌ಗಳನ್ನು ಸೋಮವಾರ ಬಿಡುಗಡೆ ಮಾಡಿದ್ದು, ಇ-ಎಪಿಕ್ ಎಂಬುದು ಸುರಕ್ಷಿತ ಪೋರ್ಟೆಬಲ್ ಡಾಕ್ಯುಮೆಂಟ್ ಫಾರ್ಮ್ಯಾಟ್(ಪಿಡಿಎಫ್) ಆವೃತ್ತಿಯಾಗಿದೆ. ಇದನ್ನು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಡೌನ್‌ಲೋಡ್ ಮಾಡಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬಹುದು. ಈಗಿನ ಮಾಹಿತಿ ಪ್ರಕಾರ ಎರಡು ಹಂತಗಳಲ್ಲಿ ಇ-ಎಪಿಕ್ ಕಾರ್ಡ್ ನೀಡಲು ತೀರ್ಮಾನಿಸಲಾಗಿದೆ. ಇ-ಎಪಿಕ್‌ನ್ನು ವೋಟರ್ ಹೆಲ್ಪ್‌ಲೈನ್ ಮೊಬೈಲ್ ಆ್ಯಪ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ https://eci.gov.in ನಲ್ಲಿಯೂ ಪಡೆದುಕೊಳ್ಳಬಹುದಾಗಿದೆ.

ಚುನಾವಣಾ ಫಲಿತಾಂಶ ಹೊರಬಿದ್ದಾದ ಮೇಲೆ ಇಲೆಕ್ಟ್ರಾನಿಕ್ ಮತದಾನ ಯಂತ್ರ (ಇವಿಎಂ) ಬಗ್ಗೆ ಟೀಕಿಸುವುದು ಸರಿಯಲ್ಲ. ಭಾರತದಲ್ಲಿ 1982ರಿಂದಲೂ ಇವಿಎಂ ಬಳಕೆ ಮಾಡಲಾಗುತ್ತದೆ. ಆದರೂ, ಆ ಬಗ್ಗೆ ಊಹಾಪೋಹಗಳನ್ನು ಹರಿಬಿಡಲಾಗುತ್ತಿದೆ. ಹೀಗಾಗಿ ಇವಿಎಂ ಬಗ್ಗೆ ಅರಿವು ಮೂಡಿಸಬೇಕಿದೆ.

■ ಪಿ.ರವಿಕುಮಾರ್, ರಾಜ್ಯ ಸರಕಾರದ ಮುಖ್ಯಕಾರ್ಯದರ್ಶಿ

ಸಂಜೆ ವಾಣಿ 1982

# ನಗರದಲ್ಲಿ ಲಸಿಕೆ ಅಭಿಯಾನ ಚುರುಕು

ಬೆಂಗಳೂರು, ಜ.25– ಕೋವಿಡ್–19 ಸಂಬಂಧ ಲಸಿಕೆ ಅಭಿಯಾನವೂ ರಾಜಧಾನಿ ಬೆಂಗಳೂರಿನಲ್ಲಿ ಚುರುಕು ಪಡೆದು–ಕೊಂಡಿದ್ದು, 2ನೇ ಹಂತದ ಲಸಿಕೆಗೆ ದಿನಗಣನೆ ಶುರುವಾಗಿದೆ.

ಕೋವಿಡ್ ಲಸಿಕೆ ಪಡೆಯುವ ಬಿಬಿಎಂಪಿ, ಕಂದಾಯ, ಪೊಲೀಸ್ ಸಿಬ್ಬಂದಿ ಸೇರಿದಂತೆ ಇತರೆ ಇಲಾಖೆಯ ಫಲಾನುಭವಿಗಳ ಪಟ್ಟಿ ಸಿದ್ಧವಾಗುತ್ತಿದ್ದು, ಮೇಲ್ನೋಟಕ್ಕೆ ನಗರದಲ್ಲಿ ಎರಡನೇ ಹಂತದಲ್ಲಿ ಬಿಬಿಎಂಪಿಯ 18 ಸಾವಿರ ಪೌರ ಕಾರ್ಮಿಕರು ಸೇರಿದಂತೆ 30 ಸಾವಿರ ನೌಕರರು, ಕಂದಾಯ ಇಲಾಖೆಯ 10 ಸಾವಿರ ಅಧಿಕಾರಿ ಸಿಬ್ಬಂದಿ ಹಾಗೂ ಪೊಲೀಸರು, ಶಿಕ್ಷಣ ಇಲಾಖೆಯ ಸಿಬ್ಬಂದಿ ಕೋವಿಡ್ ಲಸಿಕೆ ಪಡೆಯಲಿದ್ದಾರೆ. ಈ ಪೈಕಿ ಈಗಾಗಲೇ ಬಿಬಿಎಂಪಿ 22 ಸಾವಿರ ಕೋವಿಡ್ ವಾರಿಯರ್ಸ್ ಹೆಸರುಗಳನ್ನು ಕೋವಿನ್ ಪೋರ್ಟ್‌ಲ್‌ನಲ್ಲಿ ನೋಂದಣಿ ಮಾಡಲಾಗಿದೆ. ಇನ್ನು ಬೆಂಗಳೂರು ನಗರ ಜಿಲ್ಲಾಡಳಿತ 17 ಸಾವಿರ ಕೋವಿಡ್ ವಾರಿಯರ್ಸ್ ಹೆಸರುಗಳನ್ನು ನೋಂದಣಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರ ಮೊದಲ ಕಂತಿನಲ್ಲಿ ಬಿಬಿಎಂಪಿಗೆ 1.05ಲಕ್ಷ ಕೋವಿಡ್ ಲಸಿಕೆ ಹಂಚಿಕೆ ಮಾಡಿದ್ದು, ಅದರಲ್ಲಿ 40 ಸಾವಿರ ಆರೋಗ್ಯಕಾರ್ಯಕರ್ತರು ಲಸಿಕೆ ಪಡೆದುಕೊಂಡಿ–ದ್ದಾರೆ. ಸರ್ಕಾರ ಎರಡನೇ ಕಂತಿನಲಸಿಕೆಯನ್ನು ಶೀಘ್ರದಲ್ಲಿ ಬಿಬಿಎಂಪಿಗೆ ವಿತರಣೆ ಮಾಡಲಿದೆ ಎಂದು ವೈದ್ಯಾಧಿಕಾರೊಯೊಬ್ಬರು ಸಂಜೆವಾಣಿಗೆ ತಿಳಿಸಿದರು.9ನೇ ದಿನ: ನಗರದಲ್ಲಿ ಕೋವಿಡ್‌ಲಸಿಕೆ ಅಭಿಯಾನ ಒಂಭತ್ತನೆ ದಿನ ಪೂರೈಸಿದ್ದು, ಕಳೆದ 24 ಗಂಟೆಗಳಲ್ಲಿ ಖಾಸಗಿ ಆಸ್ಪತ್ರೆಗಳು ಒಳಗೊಂಡತೆ, ಒಟ್ಟು 3,049ಆರೋಗ್ಯ ಕಾರ್ಯಕರ್ತರಿಗೆಕೋವಿಡ್ ಲಸಿಕೆ ಹಾಕುವುದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಈ ಪೈಕಿ 1,080 ಮಂದಿ ಲಸಿಕೆ ಪಡೆದು–ಕೊಂಡಿದ್ದಾರೆ. ಇನ್ನು, ಬಿಬಿಎಂಪಿಯ ಎರಡು ಹಾಗೂ ಖಾಸಗಿ ಆಸ್ಪತ್ರೆಯ 27 ಲಸಿಕಾ ಕೇಂದ್ರದಲ್ಲಿ 1,080 ಆರೋಗ್ಯ ಸಿಬ್ಬಂದಿ ಲಸಿಕೆ ಪಡೆದು–ಕೊಂಡಿದ್ದಾರೆ. ಲಸಿಕೆ ಪಡೆದವರ ಪೈಕಿ ಬಿಬಿಎಂಪಿಯ 102 ಹಾಗೂ ಖಾಸಗಿ ಆಸ್ಪತ್ರೆ 978 ಆರೋಗ್ಯ ಸಿಬ್ಬಂದಿಗಳಾಗಿದ್ದಾರೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಸಂಜೆವಾಣಿ
1982

# ಇ-ಎಪಿಕ್ ಕಾರ್ಡ್ ಬಳಕೆ ಆಯುಕ್ತರ ಎಚ್ಚರಿಕೆ

ಬೆಂಗಳೂರು, ಜ.25–ಚುನಾವಣಾ ಆಯೋಗದ ಇ-ಎಪಿಕ್ (ಡಿಜಿಟಲ್ ಗುರುತಿನ ಚೀಟಿ) ಕಾರ್ಡ್ ಮತದಾನಕ್ಕೆ ಮಾತ್ರ ಸೀಮಿತವಾಗಿದ್ದು, ಇತರೆ ಕಾರಣಗಳಿಗೆ ಉಪಯೋಗಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್ ಕುಮಾರ್ ಎಚ್ಚರಿಕೆ ನೀಡಿದರು.

ನಗರದಲ್ಲಿಂದು ಪುರಭವನ ಸಭಾಂಗಣದಲ್ಲಿ ಭಾರತ ಚುನಾವಣಾ ಆಯೋಗ ವತಿಯಿಂದ ಆಯೋಜಿಸಿದ್ದ, 'ರಾಷ್ಟ್ರೀಯ ಮತದಾರರ ದಿನಾಚರಣೆ–2021' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇ-ಎಪಿಕ್ ಎನ್ನುವುದು ಮತದಾನ ಪ್ರಕ್ರಿಯೆ ಮೀಸಲಾಗಿರುವ ಒಂದು ಗುರುತಿನ ಚೀಟಿ. ಆದರೆ, ಇದು ಬೇರೆ ಯಾವುದೇ ರೀತಿಯ ಅಧಿಕೃತ ದಾಖಲೆಯಲ್ಲ.ಆದರೂ, ಕೆಲವು ಕಡೆ ಇದನ್ನು ಮಾನ್ಯ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದೆ. ಅಷ್ಟೇ ಅಲ್ಲದೆ, ಇದರ ಹೆಸರಿನಲ್ಲೂ ವಂಚನೆ ಜಾಲ ತಲೆಎತ್ತಿದ್ದು, ಈಗಾಗಲೇ ಮೊಕದ್ದಮೆಯೂ ದಾಖಲಾಗಿದೆ ಎಂದು ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತ ದಾನದ ಪಾತ್ರ ಅತ್ಯಂತ ಮಹತ್ತರವಾದುದು. ಮತದಾನ ಜನರ ಮೂಲಭೂತ ಹಕ್ಕಾಗಿದ್ದು, ಪ್ರಜೆಗಳಿಂದ ಆಯ್ಕೆಯಾದ ಸರ್ಕಾರ ಜನರ ಆಶೋತ್ತರಗಳಿಗೆ ತಕ್ಕಂತೆಯೇ ನಡೆಯಬೇಕೆಂಬುದು ಸಂವಿಧಾನದ ಆಶಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಮತದಾನದ ಮಹತ್ವ ಮತ್ತು ಪ್ರಜೆಗಳ ಮೇಲಿರುವ ಜವಾಬ್ದಾರಿಯ ಕುರಿತು ಜಾಗೃತಿ ಮೂಡಿಸಲು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ. ಸಶಕ್ತ, ಜಾಗರೂಕ, ಸುರಕ್ಷಿತ ಮತ್ತು ಮಾಹಿತಿಯುಳ್ಳ ಮತದಾರ ಈ ವರ್ಷದ ರಾಷ್ಟ್ರೀಯ ಮತದಾರರ ದಿನದ ಧ್ಯೇಯ ಎಂದ ಅವರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದರೆ, ಉತ್ತಮ ಭಾರತ ನಿರ್ಮಿಸಲು ಸಾಧ್ಯ ಎಂದರು.




ನಗರದ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿಂದು ನಡೆದ 11ನೇ ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಚುನಾವಣೆ ಗುರುತಿನ ಚೀಟಿ ಹಿಡಿದು ಅರಿವು ಮೂಡಿಸಲಾಯಿತು. ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್, ಡಾ. ಸಂಜೀವ್ ಕುಮಾರ್, ಪಾಲಿಕೆ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಇದ್ದಾರೆ.

18 ವರ್ಷ ತುಂಬಿದ ಪ್ರತಿಯೊಬ್ಬರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಮಾಡುವುದು ಚುನಾವಣಾ ಆಯೋಗದ ಗುರಿಯಾಗಿದೆ. ಅದಕ್ಕಾಗಿ ಹಲವು ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಹೆಚ್ಚು ಮಂದಿಗೆ ಪ್ರೇರೇಪಣೆ ನೀಡಲಾಗುತ್ತಿದೆ. 5 ಲಕ್ಷ ಮತದಾರು ಸೇರ್ಪಡೆಯಾಗಿದ್ದು, ಇನ್ನು ಒಟ್ಟು 5.21 ಕೋಟಿ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದರು

ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಚುನಾವಣಾ ಆಯೋಗವು ನೀಡುವ 2021ನೇ ಸಾಲಿನ ರಾಜ್ಯ ಮಟ್ಟದ ಪ್ರಶಸ್ತಿ ಪಡೆದ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಮಾತನಾಡಿ,

ನಗರದಲ್ಲಿ 1.30 ಕೋಟಿ ಜನಸಂಖ್ಯೆಯಲಿ 90 ಲಕ್ಷ 33 ಸಾವಿರ ಮತದಾರಿದ್ದಾರೆ. 8,500 ಮತಗಟ್ಟೆಗಳಿಗವೆ. ಬಿಎಲ್‌ಒಗಳು ವರ್ಷವಿಡೀ ಕೆಲಸ ಮಾಡುತ್ತಾರೆ. ಈ ಪ್ರಶಸ್ತಿ ನನಗೆ ಸಂದಿರುವ ಪ್ರಶಸ್ತಿ ಅವರಿಗೆ ಸಂದಿದಂತಾಗಿದೆ. ಮತದಾರರಿಗೆ ಶಕ್ತಿ ತುಂಬುವುದು, ಕೋವಿಡ್ ವೇಳೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಎಂದರು.

ಕಾರ್ಯಕ್ರಮದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ, ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳಾದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳಿಗೆ, ಸಹಾಯಕ ನೋಂದಣಾಧಿಕಾರಿ, ತಹಶಿಲ್ದಾರರುಗಳಿಗೆ ಮತ್ತು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಪ್ರಶಸ್ತಿ ವಿತರಿಸಲಾಯಿತು.

ರಾಜ್ಯಮಟ್ಟದ ಸ್ಪರ್ಧೆ ವಿಜೇತರು ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಮತದಾರರ ಸಾಕ್ಷರತಾ ಸಂಘಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ಹೊಸ ಮತದಾರರಿಗೆ, ವಿಕಲ ಚೇತನರಿಗೆ ಹಾಗೂ ಇತರರಿಗೆ ಮತದಾರರ ಗುರುತಿನ ಚೀಟಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಪಾಲಿಕೆ ವಿಶೇಷ ಆಯುಕ್ತ(ಆಡಳಿತ) ಜೆ.ಮಂಜುನಾಥ್ ಸೇರಿದಂತೆ ಪ್ರಮುಖರಿದ್ದರು.

ಸಂಜೆವಾಣಿ
1982

# ಫಲಿತಾಂಶ ಹೊರಬಿದ್ದಾಗ ಇವಿಎಂ ಟೀಕೆ ಸರಿಯಲ್ಲ

ಬೆಂಗಳೂರು, ಜ.25– ಚುನಾವಣೆ ನಡೆದು ಫಲಿತಾಂಶ ಹೊರಬಿದ್ದಾಗ ಎಲೆಕ್ಟ್ರಾನಿಕ್ ಮತದಾನ ಯಂತ್ರ (ಇವಿಎಂ) ಬಗ್ಗೆ ಟೀಕಿಸುವುದು ಸರಿಯಲ್ಲ.ಇದರಲ್ಲಿ ದೋಷಗಳು ಇದ್ದಲ್ಲಿ ಸಾಬೀತುಪಡಿಸಿ ಎಂದು ರಾಜ್ಯಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ಸವಾಲು ಹಾಕಿದರು.

ನಗರದಲ್ಲಿಂದುಪುರಭವನಸಭಾಂಗಣದಲ್ಲಿ ಭಾರತ ಚುನಾವಣಾ ಆಯೋಗ ವತಿಯಿಂದಆಯೋಜಿಸಿದ್ದ,'ರಾಷ್ಟ್ರೀಯ ಮತದಾರರ ದಿನಾಚರಣೆ–2021' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೇಶದಲ್ಲಿ ಚುನಾವಣೆಗಳು ನಡೆಸುವುದು ಸುಲಭವಾದ ಮಾತಲ್ಲ. ಇತ್ತೀಚಿನ ಅಮೇರಿಕಾದ ಚುನಾವಣೆಯನ್ನು ಕಂಡಿದ್ದೇವೆ.ಇನ್ನು ಭಾರತದಲ್ಲಿ 1982ರಿಂದಲೂ ಇವಿಎಂ ಬಳಕೆ ಮಾಡಲಾಗುತ್ತದೆ. ಆದರೂ ಆ ಬಗ್ಗೆ ಊಹಾಪೋಹಗಳನ್ನು ಹರಿಬಿಡಲಾಗುತ್ತದೆ. ಒಂದು ವೇಳೆ ಇವಿಎಂ ದೋಷಗಳಿದ್ದರೆ, ಕಂಡು ಹಿಡಿಯಲು ಮುಂದಾಗಿ ಎಂದರು.

ಸೋತಾಗ ಮಾತ್ರ ಇವಿಎಂ ಕುರಿತು ಟೀಕಿಸುತ್ತಾರೆ.ಜತೆಗೆ ಮಾಧ್ಯಮಗಳು ಇವಿಎಂ ವಿರುದ್ಧದ ಸುದ್ದಿಗಳಿಗೆ ಹೆಚ್ಚಿನ ಒತ್ತು ನೀಡಿದೆ.ಹಾಗಾಗಿ,ಜನರಲ್ಲಿ ಇವಿಎಂ ಕುರಿತು ಅನುಮಾನ ವ್ಯಕ್ತವಾಗಿದೆ ಎಂದ ಅವರು,

ಭಾರತದಲ್ಲಿ ಇವಿಎಂ ಸರಿಯಾಗಿ ಇದೆ. ಆ ಬಗ್ಗೆ ಎಲ್ಲರಲ್ಲೂ ಅರಿವು ಮೂಡಿಸಬೇಕು. ತಪ್ಪು ಮಾಹಿತಿಯಾರೂ ನೀಡಬಾರದು ಎಂದು ತಿಳಿಸಿದರು.

ಮತದಾನ ಪ್ರಕ್ರಿಯೆಯಲ್ಲಿ ಭಾಗಿಯಾಗದ ಜನರು ಆಡಳಿತ ನಡೆಸುವ ಸರ್ಕಾರವನ್ನು ಟೀಕಿಸುವುದು ಸರಿಯಲ್ಲ.ನೀವು ಮತ ಚಲಾಯಿಸಿದರೆ ಮಾತ್ರ, ಟೀಕಿಸುವ, ಪ್ರಶ್ನಿಸುವ ಹಕ್ಕು ಪಡೆಯುತ್ತಿದ್ದೀರಿ ಎಂದ ಅವರು, ವಲಸೆ ಕಾರ್ಮಿಕರು ಎಲ್ಲೇ ಇದ್ದರೂ ಮತ ಚಲಾಯಿಸುವ ಹಕ್ಕು ನೀಡಬೇಕು. ಇ ನಿಟ್ಟಿನಲ್ಲಿ ಕಾನೂನು ಬದಲಾವಣೆ ಮಾಡುವ ಮೂಲಕ ಹೊಸ ವ್ಯವಸ್ಥೆ ರೂಪಿಸಬೇಕೆಂದರು.

ಮತದಾನಕ್ಕೆ ಈ ಹಿಂದೆ 21 ವರ್ಷ ತುಂಬಿದವರಿಗೆ ಗುರುತಿನ ಚೀಟಿ ನೀಡಲಾಗುತ್ತಿತ್ತು. ಈಗ 18 ವರ್ಷಕ್ಕೆ ಗುರುತಿನ ಚೀಟಿ ನೀಡಲಾಗುತ್ತಿದೆ. ಹಾಗಾಗಿ, ಯುವ ಪೀಳಿಗೆಗೆ ಮತದಾನ ಮಾಡುವ ಬಗ್ಗೆ ಹೆಚ್ಚು ಹೆಚ್ಚು ಅರಿವು ಮೂಡಿಸಬೇಕು. ಮತದಾನ ಪ್ರಕ್ರಿಯೆಯಲ್ಲಿ ಯುವಕರ ಪಾತ್ರ ಬಹಳ ಪ್ರಾಮುಖ್ಯವಾಗಿದೆ ಎಂದರು.

ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಮತದಾನ ಮಾಡುವ ಮೂಲಕ ಶಕ್ತಿಯುತವಾಗಿ ಮಾಡಬೇಕು. ಇನ್ನು,ಮತದಾರರ ಪಟ್ಟಿಗೆ ಎಲ್ಲರೂ ನೋಂದಣಿ ಮಾಡಿಕೊಳ್ಳಬೇಕು. ಈ ಪೈಕಿ ವೆಬ್ ಸೈಟ್ ಮೂಲಕವೇ ಮನೆಯಲ್ಲೇ ಕೂತು ಮತದಾರರ ಗುರುತಿನ ಚೀಟಿ ಪಡೆಯಬಹುದು ಎಂದು ಸಲಹೆ ನೀಡಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

### ■ ಭಾರತ ಚುನಾವಣಾ ಆಯೋಗದ ಆ್ಯಪ್ ಮೂಲಕ

# ಡಿಜಿಟಲ್ ಗುರುತಿನ ಚೀಟಿಗೆ ಅವಕಾಶ

**ಬೆಂಗಳೂರು,ಜ.25-** ಕೇಂದ್ರ ಚುನಾವಣಾ ಆಯೋಗ ಇಂದು ಹೊಸ ಆ್ಯಪ್ ಬಿಡುಗಡೆ ಮಾಡಿದ್ದು, ಇದರ ಮೂಲಕ ಸಾರ್ವಜನಿಕರೇ ನೇರವಾಗಿ ಡಿಜಿಟಲ್ ಗುರುತಿನ ಚೀಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮುಖ್ಯ ಚುನಾವಣಾಧಿಕಾರಿ ಡಾ.ಸಂಜೀವ್‌ಕುಮಾರ್ ಹೇಳಿದರು.

ಚುನಾವಣಾ ಆಯೋಗ ನಗರದ ಪುರಭವನದಲ್ಲಿಂದು ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ-2021 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮತದಾರರ ಗುರುತಿನ ಚೀಟಿ ಚುನಾವಣೆಗೆ ಮಾತ್ರ ಬಳಕೆ ಆಗಬೇಕು. ಆದರೆ ಬೇರೆ ದಾಖಲೆಗಳಿಗೂ ಇದನ್ನು ಬಳಸುತ್ತಿದ್ದಾರೆ. ಅದು ತಪ್ಪು ಎಂದು ಹೇಳಿದರು.

ಇನ್ನು ಮುಂದೆ ಎಪಿಕ್ ಕಾರ್ಡ್‌ಗಳು ಚುನಾವಣೆಗೆ ಮಾತ್ರ ಬಳಕೆಯಾಗುವಂತೆ ಕಾನೂನು ತರುವುದಾಗಿ ಅವರು ತಿಳಿಸಿದರು.

ಮುಖ್ಯ ಚುನಾವಣಾ ಅಧಿಕಾರಿ ಡಾ. ಸಂಜೀವ್ ಕುಮಾರ್ ಮಾತನಾಡಿ, ರಾಷ್ಟ್ರಾದ್ಯಂತ ರಾಷ್ಟ್ರ ಮತದಾರರ ದಿನಾಚರಣೆ ಆಚರಿಸಲಾಗುತ್ತಿದೆ. ಮತದಾರರಲ್ಲಿ ಚುನಾವಣೆ ಹಾಗೂ ಅದರ ಮಹತ್ವದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಮತದಾರರ ದಿನವನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಮ್ಮ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮತದಾರರು ಪ್ರಮುಖ ಪಾತ್ರ ವಹಿಸಲಿದ್ದಾರೆ. ಮತದಾರರಿಗೆ ಸೂಕ್ತ ಮಾಹಿತಿ ನೀಡಬೇಕು. 18 ವರ್ಷ ತುಂಬಿದವರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವುದು ಚುನಾವಣಾ ಆಯೋಗದ ಗುರಿಯಾಗಿದೆ. ಅದಕ್ಕಾಗಿ ಹಲವು ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಹೆಚ್ಚು ಮಂದಿಗೆ ಪ್ರೇರೇಪಣೆ ನೀಡಲಾಗುತ್ತಿದೆ. 5 ಲಕ್ಷ ಮತದಾರು ಸೇರ್ಪಡೆಯಾಗಿದ್ದು, 5.21 ಕೋಟಿ ಮತದಾರರಿದ್ದಾರೆ ಎಂದು ವಿವರಿಸಿದರು.

ಚುನಾವಣೆ ಬಹಳ ಕಠಿಣವಾದ ಕೆಲಸ ಹಾಗೂ ಜವಾಬ್ದಾರಿಯುತ ಕೆಲಸವಾಗಿದೆ. ಚುನಾವಣೆ ವೇಳೆ ಬೇರೆ ಬೇರೆ ಸವಲತ್ತುಗಳನ್ನು ನೀಡಲಾಗುತ್ತಿದೆ. 80 ವರ್ಷ ದಾಟಿದ ಮತದಾರರಿಗೆ ಪೋಸ್ಟಲ್ ಬ್ಯಾಲೆಟ್ ವ್ಯವಸ್ಥೆ ಮಾಡಲಾಗಿದೆ. ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘನೆಯನ್ನು ತಡೆಯಲು ಸಿ-ವಿಜಿಲ್ ಆ್ಯಪ್ ಸಿದ್ಧಪಡಿಸಲಾಗಿದೆ.

ಆ ಮೂಲಕ ನಾವು ನೀತಿ ಸಂಹಿತೆ ಉಲ್ಲಂಘನೆಯಾಗು ವುದನ್ನು ತಡೆಯಬಹುದಾಗಿದೆ. ನಾಗರಿಕರು ಛಾಯಾಚಿತ್ರ, ವಾಯ್ಸ್, ವೀಡಿಯೋ ಮೂಲಕ ಕಳುಹಿಸಬಹುದು. ಸಂಬಂಧಪಟ್ಟ ಅಧಿಕಾರಿಗಳೂ ಕೂಡಲೆ ಅಕ್ರಮ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ಮಾತನಾಡಿ, ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಹೊಸಬರಿಗೆ ಮತದಾರರ ಗುರುತಿನ ಚೀಟಿ, ಚುನಾವಣೆಗೆ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ವಿತರಣೆ ಮಾಡಲಾಗಿದೆ. ಭಾರತದಲ್ಲಿ ಯಾರೊಬ್ಬರೂ ಗಂಭೀರವಾಗಿ ಪರಿಗಣಿಸಿಲ್ಲ. ಚುನಾವಣಾ ಪ್ರಕ್ರಿಯೆ ಬಹಳ ಕಠಿಣವಾಗಿದೆ. ಹಿಂದೆ 21 ವರ್ಷ ತುಂಬಿದವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗುತ್ತಿತ್ತು. ಈಗ 18 ವರ್ಷ ತುಂಬಿದವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗುತ್ತಿದೆ ಎಂದರು.

ಚುನಾವಣೆ ಬಗ್ಗೆ ಯಾರೂ ಹೆಚ್ಚು ಗಮನವರಿಸುತ್ತಿಲ್ಲ. ಹಕ್ಕು ಬಂದಾಗ ನಿಮ್ಮ ಹಕ್ಕನ್ನು ಸರಿಯಾಗಿ ಚಲಾಯಿಸಬೇಕು. ಯುವ ಪೀಳಿಗೆಗೆ ಮತದಾನ ಮಾಡುವ ಬಗ್ಗೆ ಹೆಚ್ಚು ಹೆಚ್ಚು ಅರಿವು ಮೂಡಿಸಬೇಕು. ಮತದಾನ ಪ್ರಕ್ರಿಯೆಯಲ್ಲಿ ಯುವಕರ ಪಾತ್ರ ಬಹಳ ಪ್ರಾಮುಖ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಮತದಾನ ಮಾಡಬೇಕು ಎಂದು ಹೇಳಿದರು.


ಈಗಲೂ ಕೂಡ ಹೆಚ್ಚು ಮಂದಿ ನೋಂದಣಿ ಮಾಡಿಕೊಂಡಿಲ್ಲ. ಮತದಾರರ ಪಟ್ಟಿಗೆ ಎಲ್ಲರೂ ನೋಂದಣಿ ಮಾಡಿಕೊಳ್ಳಬೇಕು. ಈ ಪೈಕಿ ವೆಬ್‌ಸೈಟ್ ಮೂಲಕವೇ ಮನೆಯಲ್ಲೇ ಕೂತು ಮತದಾರರ ಗುರುತಿನ ಚೀಟಿ ಪಡೆಯಬಹುದು ಎಂದು ತಿಳಿಸಿದರು.

ಇವಿಎಂಗಳು ಬಳಕೆ ಮಾಡಿ ಚುನಾವಣೆ ನಡೆಸಲಾಗುತ್ತಿದೆ. ಆದರೂ ಆ ಬಗ್ಗೆ ಊಹಾಪೋಹಗಳಿವೆ. ನಮ್ಮ ದೇಶದಲ್ಲಿ ಇವಿಎಂ ಸರಿಯಾಗಿ ಕೆಲಸ ನಿರ್ವಹಿಸಿವೆ. ಇದರ ಬಗ್ಗೆ ಎಲ್ಲರಲ್ಲೂ ಅರಿವು ಮೂಡಿಸಬೇಕು. ಯಾರೂ ತಪ್ಪು ಮಾಹಿತಿ ನೀಡಬಾರದು ಎಂದು ಮನವಿ ಮಾಡಿದರು.

1.30 ಕೋಟಿ ಜನಸಂಖ್ಯೆಯಲ್ಲಿ 90.33 ಲಕ್ಷ ಮತದಾರಿದ್ದಾರೆ. 8,500 ಮತಗಟ್ಟೆಗಳಿವೆ. ಬಿಎಲ್‌ಒಗಳು ವರ್ಷವಿಡೀ ಕೆಲಸ ಮಾಡುತ್ತಾರೆ. ಅವರಿಗೆ ಈ ಪ್ರಶಸ್ತಿ ನೀಡಿದ್ದಾರೆ ಎಂದರು.

ಮತದಾರರಿಗೆ ಶಕ್ತಿ ತುಂಬುವುದು, ಕೋವಿಡ್ ವೇಳೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು, ಯುವ ಮತದಾರರೆಲ್ಲಾ ಮತದಾರರ ಚೀಟಿಯನ್ನು ಪಡೆಯಲು ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ




ಪುರಭವನದಲ್ಲಿಂದು ನಡೆದ ರಾಷ್ಟ್ರೀಯ ಮತದಾನ ದಿನಾಚರಣೆ 2021 ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್, ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್ ಕುಮಾರ್, ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್, ವಿಶೇಷ ಆಯುಕ್ತ ಜೆ. ಮಂಜುನಾಥ್ ಮತ್ತಿತರ ಅಧಿಕಾರಿಗಳು ಪಾಲ್ಗೊಂಡಿದ್ದರು.

ಈ ಸಂಜೆ Mon, 25 January 2021
https://epaper.eesanje.com/c/57979747

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಹೊಸ ಆ್ಯಪ್ ಬಿಡುಗಡೆ

**ಬೆಂಗಳೂರು, ಜ.25-** ಮತದಾರರಿಗೆ ನೆರವಾಗುವ ನಿಟ್ಟಿನಲ್ಲಿ ಕೇಂದ್ರ ಚುನಾವಣಾ ಆಯೋಗದದಿಂದ ಹೊಸ ಆ್ಯಪ್ ಬಿಡುಗಡೆ ಮಾಡಲಾಯಿತು.

ಪುರಭವನದಲ್ಲಿ ನಡೆದ ಸಮಾರಂಭದಲ್ಲಿ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿ ಎನ್.ಮಂಜುನಾಥ್ ಪ್ರಸಾದ್ ರವರು ಪ್ರಶಸ್ತಿ ಸ್ವೀಕರಿಸಿದರು.ತದನಂತರ ಚುನಾವಣಾ ಪ್ರಕ್ರಿಯೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ, ಜಿಲ್ಲಾ ನೋಡಲ್ ಅಧಿಕಾರಿಗಳಾದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳಿಗೆ, ಸಹಾಯಕ ನೋಂದಣಾಧಿಕಾರಿಗಳಿಗೆ/ತಹಶಿಲ್ದಾರರುಗಳಿಗೆ ಮತ್ತು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಪ್ರಶಸ್ತಿ ವಿತರಿಸಲಾಯಿತು. ರಾಜ್ಯ ಮಟ್ಟದ ಸ್ಪರ್ಧೆ ವಿಜೇತರು ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಮತದಾರರ ಸಾಕ್ಷರತಾ ಸಂಘಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ಹೊಸ ಮತದಾರರಿಗೆ, ವಿಕಲ ಚೇತನರಿಗೆ ಹಾಗೂ ಇತರರಿಗೆ ಮತದಾರರ ಗುರುತಿನ ಚೀಟಿ ವಿತರಿಸಲಾಯಿತು. ಈ ವೇಳೆ ವಿಶೇಷ ಆಯುಕ್ತರು(ಆಡಳಿತ) ಜೆ.ಮಂಜುನಾಥ್, ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ಸಂಜೆ Mon, 25 January 2021
https://epaper.eesanje.com/c/579